# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ –02 ಸಂಚಿಕೆ –196 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಕೆಎ/ಎಸ್‌ಕೆ/ಸಿಟಿಎ–874/2024–2026 | ಚಿತ್ರದುರ್ಗ | ದಿನಾಂಕ: 24–02–2025 ಸೋಮವಾರ | ಪುಟ: 4 | ಬೆಲೆ : ರೂ.2–00
Volume - 02 Issue - 196 | RNI No: KARKAN/2023/88462 | KA/SK/CTA-874/2024-2026 | Chitradurga | Date: 24-02-2025 Monday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಪ್ರಜಾಪಿತಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ವತಿಯಿಂದ 3 ದಿನ ಶಿವನಾಮಸ್ಮರಣೆ **2**

ನಿರಂತರ ವಿದ್ಯುತ್ ಪೂರೈಕೆಗೆ ಸರ್ಕಾರದ ಸಂಕಲ್ಪ: ಸಚಿವ ಡಿ.ಸುಧಾಕರ್ **3**

ರಾಹುಲ್ ತಂಡಕ್ಕೆ 'ಅಪ್ಪು 11' ಕ್ರಿಕೆಟ್ ಕಪ್ **4**



ಸುದ್ದಿ, ಜಾಹಿರಾತಿಗೆ 9686622252


# ನಾಗತೀಹಳ್ಳಿ ಸರ್ಕಾರಿ ಶಾಲೆ ದತ್ತು ಪಡೆದ ಸದ್ಗುರು ಆಯುರ್ವೇದ ಸಂಸ್ಥೆ

## ಶಾಲಾ ಮಕ್ಕಳ ಕಲಿಕೆಗೆ ಬೇಕಾದ ಮೂಲಸೌಕರ್ಯ ಒದಗಿಸಲು ಸದಾ ಸಿದ್ಧ; ಡಿ.ಎಸ್.ಪ್ರದೀಪ್

» **ಹೊಸದುರ್ಗ**

ರಾಜ್ಯದ ಸರ್ಕಾರಿ ಶಾಲೆಗಳನ್ನು ಸಾರ್ವಜನಿಕರ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಕಾರ್ಯ 2–3 ವರ್ಷಗಳಿಂದ ವೇಗವಾಗಿ ನಡೆಯುತ್ತಿದೆ. 'ಸರ್ಕಾರಿ ಶಾಲೆಗಳನ್ನು ಉಳಿಸಿ' ಎನ್ನುವ ಆಂದೋಲನದಲ್ಲಿ ಬಹಳಷ್ಟು ಮಂದಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಕೆಲ ಸಾಧಕರು ಸರ್ಕಾರಿ ಶಾಲೆಗಳನ್ನು ದತ್ತು ಸ್ವೀಕಾರ ಮಾಡಿ, ಮೂಲಸೌಕರ್ಯ ಒದಗಿಸುವ ಕೆಲಸ ಮಾಡುತ್ತಿದ್ದಾರೆ. ಅದರಂತೆಯೇ, ಸದ್ಗುರು ಆಯುರ್ವೇದ ಸಂಸ್ಥೆಯ ಮಾಲೀಕರಾಗಿರುವ ಸದ್ಗುರು ಪ್ರದೀಪ್ ಮತ್ತು ಅವರ ಪತ್ನಿ ಡಾ. ಸ್ವಾತಿ ಪ್ರದೀಪ್ ಅವರು ಹೊಸದುರ್ಗ ತಾಲೂಕಿನಲ್ಲಿ 25ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ದತ್ತು ಸ್ವೀಕಾರ ಮಾಡಿ, ಮೂಲಸೌಕರ್ಯ ಮತ್ತು ಮಕ್ಕಳ ಕಲಿಕೆಗೆ ಬೇಕಾಗಿರುವ ಪರಿಕರಗಳನ್ನು ಒದಗಿಸುವ ಕಾರ್ಯ ಮಾಡುತ್ತಿದ್ದಾರೆ.

ಇತ್ತೀಚೆಗಷ್ಟೇ, ತಾಲೂಕಿನ ಮತ್ತೋಡು ಹೋಬಳಿಯ ನಾಗತೀಹಳ್ಳಿ ಸರ್ಕಾರಿ ಶಾಲೆಯನ್ನು ಸದ್ಗುರು ಪ್ರದೀಪ್ ದತ್ತು ಸ್ವೀಕಾರ ಮಾಡಿದರು. ಈ ಕುರಿತು ಮಾತನಾಡಿದ ಅವರು, ಹಿಂದಿನ ಕಾಲದಲ್ಲಿ ಬಾಲ್ಯ ಜೀವನದಲ್ಲಿ ಚಿಕ್ಕ ಮಕ್ಕಳಿಗೆ ಚಂದಮಾಮ ತೋರಿಸಿ, ನೀತಿ ಕಥೆ ಹೇಳುತ್ತಾ, ಲಾಲಿ ಹಾಡು, ಜೋಗುಳ ಪದಗಳನ್ನು ಹಾಡುತ್ತಾ, ಊಟ ಮಾಡಿಸುವ ಮತ್ತು ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವ ಸಂಸ್ಕೃತಿ–



ಸಂಸ್ಕಾರ ಮತ್ತು ಸಂಪ್ರದಾಯವಿತ್ತು. ಆದರೆ, ಇಂದಿನ ದಿನಗಳಲ್ಲಿ ಅಧಿಕ ಒತ್ತಡದಲ್ಲಿ ತಾಯಂದಿರು ತಮ್ಮ ಮಕ್ಕಳಿಗೆ ಮೊಬೈಲ್ ನಲ್ಲಿ ವಿಡಿಯೋ, ಸಂತಸ ಪಡುವ ಯಾವುದೇ ಮಕ್ಕಳ ಹಾಸ್ಯ ಭರಿತ ಹಾಡು ಅಥವಾ ಗೇಮ್ ಗಳನ್ನು ತೋರಿಸುತ್ತಾ, ಊಟ ಮಾಡಿಸುವ ಪರಿ ನೋಡಿದರೆ, ನಾವೇ ನಮ್ಮ ಮಕ್ಕಳನ್ನು ಮೊಬೈಲ್ ದಾಸ್ಯಕ್ಕೆ ಒಳಪಡಿಸುತ್ತಿದ್ದೇವೇನೊ ಎನ್ನುವ ಆತಂಕ ಕಾಡುತ್ತಿದೆ. ಮೊಬೈಲ್ ಮಕ್ಕಳಲ್ಲಿ ಮಾಹಿತಿ ಸಂಗ್ರಹ, ವಿಷಯ ಜ್ಞಾನ ಹೆಚ್ಚಿಸುತ್ತದೆ. ಆದರೆ, ಹಿರಿಯರಿಗೆ ಗೌರವ ನೀಡುವುದು, ಮನೆಗೆ ಬಂದವರನ್ನು ಸ್ವಾಗತಿಸುವುದು ಮತ್ತು ಆತ್ಮೀಯತೆಯನ್ನು ಇಲ್ಲದಂತಾಗಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮೊಬೈಲ್ ಬಳಕೆ ಅತಿಯಾದಂತೆ ಅನುಬಂಧ ಮತ್ತು ಸಂಬಂಧಗಳು ದೂರವಾಗುತ್ತಿವೆ. ಮೊಬೈಲ್ ಸೆಳೆತ ಮಿತಿಮೀರುತಿದ್ದು, ಇಂದು ನಮ್ಮ ಭಾವನೆ, ಕಲ್ಪನೆ, ಅನಿಸಿಕೆ, ಅಭಿಪ್ರಾಯ, ಸಲಹೆ–ಸೂಚನೆ ಮತ್ತು ಚಿಂತನೆಗಳಿಗೆ ಬೆಲೆಯಿಲ್ಲದೇ ಮೊಬೈಲ್ ನಲ್ಲಿ ಕಾಣಸಿಗುವ ಯಾರದೋ ಸಂಗತಿ, ಮಾಹಿತಿ ಅಥವಾ ವಿಷಯಗಳಿಗೆ ಚಿಂತನೆಯ ಚಿತೆಯೊಳಗೆ ದಹಿಸುವ ಮನಸ್ಥಿತಿ ನಮ್ಮದಾಗುತ್ತಿದೆ. ಮೊಬೈಲ್ ಮಾತ್ರ ಜೀವನವಲ್ಲ, ಅದರ ಆಚೆಗೂ ಮೀರಿ ನಮ್ಮ ಬದುಕಿದೆ ಎನ್ನುವುದನ್ನು ಮಕ್ಕಳಿಗೆ ಪೋಷಕರು ಅರ್ಥೈಸಬೇಕಿದೆ ಎಂದು ಹೇಳಿದರು.ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕೆಂಬ ಮಹತ್ತರ ಉದ್ದೇಶದಿಂದಾಗಿ ಹಿಂದುಳಿದಿರುವ ತಾಲೂಕಿನ ಕೆಲ ಶಾಲೆಗಳನ್ನು ದತ್ತು ಸ್ವೀಕಾರ ಮಾಡಿ, ಮೂಲಸೌಕರ್ಯ ಒದಗಿಸುವ ಕಾರ್ಯ ನಮ್ಮ ಸಂಸ್ಥೆಯಿಂದ ನಡೆಯುತ್ತಿದೆ. ಶಾಲೆಗಳಿಗೆ ಪೀಠೋಪಕರಣ, ಕುಡಿಯುವ ನೀರು, ಕಂಪ್ಯೂಟರ್, ಶೌಚಾಲಯ, ಸ್ಮಾರ್ಟ್ ತರಗತಿಗಳಿಗೆ ಬೇಕಾದ ವಸ್ತುಗಳು ಹಾಗೂ ಇನ್ನಿತರ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಅದರಂತೆಯೇ, ನಾಗತೀಹಳ್ಳಿ ಸರ್ಕಾರಿ ಶಾಲೆಗೆ ಬೇಕಾಗಿರುವ ಮೂಲಸೌಕರ್ಯ ಒದಗಿಸಿ, ಮಕ್ಕಳ ಉತ್ತಮ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಲು ನಮ್ಮ ಸದ್ಗುರು ಸಂಸ್ಥೆ ಸದಾ ಬದ್ಧವಾಗಿದೆ ಎಂದು ತಿಳಿಸಿದರು.

> ನಾಗತೀಹಳ್ಳಿ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗದ ಜನಾಂಗದವರು ಹೆಚ್ಚಾಗಿ ವಾಸಮಾಡುವ ಗ್ರಾಮವಾಗಿದ್ದು, ಶೈಕ್ಷಣಿಕವಾಗಿ ಹಿಂದುಳಿದಿದೆ. ಈ ಗ್ರಾಮದ ಸರ್ಕಾರಿ ಶಾಲೆಗೆ ಮೂಲಸೌಕರ್ಯಗಳ ಅಗತ್ಯವಿತ್ತು. ಈ ವಿಷಯವನ್ನು ಸದ್ಗುರು ಆಯುರ್ವೇದ ಸಂಸ್ಥೆಯ ಮಾಲೀಕರಾದ ಡಿ.ಎಸ್. ಪ್ರದೀಪ್ ರವರಿಗೆ ತಿಳಿಸಲಾಯಿತು. ವಿಷಯ ತಿಳಿದ ತಕ್ಷಣವೇ ನಿಮ್ಮ ಶಾಲೆಯನ್ನು ನಮ್ಮ ಸಂಸ್ಥೆ ದತ್ತು ಸ್ವೀಕಾರ ಮಾಡುತ್ತಿದೆ. ಶಾಲೆಗೆ ಬೇಕಾಗಿರುವ ಸೌಕರ್ಯವನ್ನು ಒದಗಿಸುವ ಕೆಲಸ ಮಾಡುತ್ತೇವೆಂದು ಹೇಳಿದ್ದರು. ಅದರಂತೆಯೇ, ಶಾಲೆಗೆ ಬೇಕಾಗಿರುವ ಪರಿಕರಗಳನ್ನು ನೀಡುತ್ತಿದ್ದಾರೆ. ಶಾಲೆಗಳ ನಿಜವಾದ ದೇವಾಲಯವೆಂದು ಅರಿತು, ಶಾಲೆಗಳ ಪ್ರಗತಿ ಕಾರ್ಯಕ್ಕೆ ಮುಂದಡಿಯಿಟ್ಟಿರುವ ಪ್ರದೀಪ್ ರವರ ಕಾರ್ಯ ಶ್ಲಾಘನೀಯವಾದದ್ದು.
>
> » **ಜಯಪ್ರಕಾಶ್. ಮುಖ್ಯೋಪಾಧ್ಯಾಯರು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ನಾಗತೀಹಳ್ಳಿ**

> ನಾಗತೀಹಳ್ಳಿ ಗ್ರಾಮ ಜಿಲ್ಲೆ ಮತ್ತು ತಾಲೂಕಿನ ಗಡಿಗ್ರಾಮವಾಗಿದೆ. ಈ ಗ್ರಾಮದಲ್ಲಿ ಹೆಚ್ಚಾಗಿ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗದ ಜನರು ಹೆಚ್ಚಾಗಿ ವಾಸ ಮಾಡುತ್ತಿದ್ದು, ಈ ಗ್ರಾಮದ ಮಕ್ಕಳ ಕಲಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು, ಶಾಲೆಗೆ ಬೇಕಾದ ಮೂಲಸೌಕರ್ಯ ಕಲ್ಪಿಸಬೇಕು ಎನ್ನುವ ಸದುದ್ದೇಶದಿಂದ ನಮ್ಮ ಸದ್ಗುರು ಸಂಸ್ಥೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯನ್ನು ದತ್ತು ಪಡೆದುಕೊಂಡಿದೆ. ಮುಂದಿನ ದಿನಗಳಲ್ಲಿ ಶಾಲೆಗೆ ಬೇಕಾಗಿರುವ ಮೂಲಸೌಕರ್ಯ, ಮಕ್ಕಳ ಕಲಿಕೆಗೆ ಅಗತ್ಯವಿರುವ ಪರಿಕರಗಳನ್ನು ಒದಗಿಸಿಕೊಡುವ ಕಾರ್ಯ ನಡೆಯಲಿದೆ.
>
> » **ಡಿ.ಎಸ್. ಪ್ರದೀಪ್ ಮಾಲೀಕರು, ಸದ್ಗುರು ಆಯುರ್ವೇದ ಸಂಸ್ಥೆ, ಹೊಸದುರ್ಗ**



# ಆಕಸ್ಮಿಕ ಬೆಂಕಿ: ಟ್ರಾಲಿಯಲ್ಲಿ ತೊಗರಿಕಡ್ಡಿ ಸುಟ್ಟುಭಸ್ಮ

» **ಚಳ್ಳಕೆರೆ**

ತಾಲ್ಲೂಕಿನ ಪರಶುರಾಮಪುರ ಹೋಬಳಿಯ ತೊರೆಬೀರನಹಳ್ಳಿ ಗ್ರಾಮದಲ್ಲಿ ಶನಿವಾರ ಟ್ರ್ಯಾಕ್ಟರ್ ಟ್ರಾಲಿಯಲ್ಲಿ ತೊಗರಿಕಡ್ಡಿ ಸಾಗಾಟ ಮಾಡುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಟ್ರ್ಯಾಕ್ಟರ್‌ನಲ್ಲಿದ್ದ ತೊಗರಿಕಡ್ಡಿ ಬೆಂಕಿಯಲ್ಲಿ ಸುಟ್ಟುಹೋಗಿದೆ. ಚಾಲಕ ಕೂಡಲೇ ಜಾಗೃತಗೊಂಡು ಸಾರ್ವಜನಿಕರ ಸಹಾಯದಿಂದ ಟ್ರಾಲಿಯಲ್ಲಿದ್ದ ತೊಗರಿಕಡ್ಡಿಯನ್ನು ನೆಲಕ್ಕೆ ಎಸೆದಿದ್ದಾನೆ. ಗ್ರಾಮದ ಶಿವಮ್ಮ ಮತ್ತು ಹನುಮಂತರಾಯ ಎಂಬುವವರಿಗೆ ಸೇರಿದ ಜಮೀನಿನಲ್ಲಿದ್ದ ತೊಗರಿಕಡ್ಡಿಗಳನ್ನು ಟ್ರ್ಯಾಕ್ಟರ್‌ನಲ್ಲಿ ತರುವಾಗ ಈ ಅವಘಡ ಸಂಭವಿಸಿದೆ. ಅಗ್ನಿಶಾಮಕ ಪಡೆ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದೆ. ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದರು.

**ಪ್ರಮುಖ ಸುದ್ದಿ**

## ವಾಸವಿಕಾಲೋನಿ ದರೋಡೆ ಪ್ರಕರಣ: ಜಿಲ್ಲಾ ರಕ್ಷಣಾಧಿಕಾರಿಗಳಿಂದ ತೀವ್ರ ವಿಚಾರಣೆ

# ಆರೋಪಿಗಳ ಪತ್ತೆಗೆ ಬಲೆಬೀಸಿದ ಖಾಕಿಪಡೆ

» **ಚಳ್ಳಕೆರೆ**

ನಗರದ ವಾಸವಿಕಾಲೋನಿಯಲ್ಲಿ ಶನಿವಾರ ಬೆಳಗ್ಗೆ ಹಾಡುಹಗಲೇ ನಡೆದ ದರೋಡೆ ಪ್ರಕರಣದ ಪತ್ತೆಕಾರ್ಯವನ್ನು ಪೊಲೀಸ್ ಇಲಾಖೆ ಚುರುಕುಗೊಳಿಸಿದೆ. ವಾಸವಿ ಕಾಲೋನಿ ನಿವಾಸಿ ವಾಣಿಜ್ಯೋದ್ಯಮಿ ವೆಂಕಟೇಶಲುರವರ ಪತ್ನಿ ಗೀತಾಲಕ್ಷ್ಮಿ(52), ತಾಯಿ ಸಾವಿತ್ರಮ್ಮ ಇವರಿಗೆ ಚಾಕುತೋರಿಸಿ ಪ್ರಾಣಬೆದರಿಕೆ ಒಡ್ಡಿ ಮನೆಯಲ್ಲಿದ್ದ ಬಂಗಾರ ಬಳೆ, ಮಾಂಗಲ್ಯದ ಸರ, ಉಂಗುರ, ಕಿವಿಓಲೆ, ಕರಿಮಣಿಸರ ಮುಂತಾದವುಗಳು ಸೇರಿ 310 ಗ್ರಾಂ ತೂಕದ 8.75ಲಕ್ಷ ಮೌಲ್ಯದ ಆಭರಣವನ್ನು ಕಳ್ಳರು ದರೋಡೆ ಮಾಡಿಕೊಂಡುಹೋಗಿರುತ್ತಾರೆ.

ಮಾಹಿತಿ ತಿಳಿದ ಕೂಡಲೇ ಜಿಲ್ಲಾ ರಕ್ಷಣಾಧಿಕಾರಿ ರಂಜಿತ್‌ಕುಮಾರ್‌ಬಂಡಾರು ಸ್ಥಳಕ್ಕೆ ದಾವಿಸಿ ದರೋಡೆಕೋರರ ಕೃತ್ಯದ ಬಗ್ಗೆ ಗೀತಾಲಕ್ಷ್ಮಿ ಮತ್ತು ಸಾವಿತ್ರಮ್ಮನವರಿಂದ ಸಂಪೂರ್ಣಮಾಹಿತಿ ಪಡೆದಿದ್ದಾರೆ. ದರೋಡೆ ನಡಸಿದ ಕಳ್ಳರು ಸುಮಾರು 30ರಿಂದ40 ವಯಸ್ಸಿನವರಾಗಿದ್ದು, ಎತ್ತರ ದಪ್ಪ ಇದ್ದು, ಕನ್ನಡ, ತೆಲುಗು ಮಾತನಾಡುತ್ತಿದ್ದರು. ಜೀನ್ಸ್‌ಪ್ಯಾಂಟ್



ಧರಿಸಿದ್ದಲ್ಲದೆ, ಓರ್ವ ವ್ಯಕ್ತಿ ಮಾಸ್ಕ್ ಹಾಕಿದ್ದನ್ನು ಮಾಹಿತಿ ನೀಡಿದ್ದಾರೆ.

ಗೀತಾಲಕ್ಷ್ಮಿ ಯಾವುದೋ ಕಾರ್ಯಕ್ರಮಕ್ಕೆ ತೆರಳಲು ಮನೆಯಲ್ಲಿದ್ದ ಬಂಗಾರದ ಆಭರಣವನ್ನು ಅಡಿಗೆ ಮನೆಯ ಕಟ್ಟೆಮೇಲೆ ಇಟ್ಟ ಸಂದರ್ಭದಲ್ಲೇ ಈ ಕೃತ್ಯ ನಡೆದಿದೆ. ಅಲ್ಲಿನ ನಿವಾಸಿಗಳು ಹೇಳುವ ಪ್ರಕಾರ ಮೂರರಿಂದ ನಾಲ್ಕು ಜನ ಕಳ್ಳರು ಕಾರಿನಲ್ಲಿ ಆಗಮಿಸಿ ಮನೆಯ ಸನಿಹದಲ್ಲೇ ಕಾರನ್ನು ನಿಲ್ಲಿಸಿದ್ದರು ಎನ್ನಲಾಗಿದೆ. ವಾಸವಿ ಕಾಲೋನಿಯಲ್ಲಿ ಹಾಡುಹಗಲೇ ಯಾವುದೇ ರೀತಿಯ ಅಂಜಿಕೆ ಇಲ್ಲದೆ ದರೋಡೆಕೋರರು ದರೋಡೆ ನಡೆಸಿದ್ದು, ಇಲ್ಲಿನ ನಿವಾಸಿಗಳಿಗೆ ದರೋಡೆಕಾರರ ಭಯ ಇನ್ನೂ ಕಾಡುತ್ತಿದೆ. ವಿಶೇಷವಾಗಿ ಮಹಿಳೆಯರು ಬಂಗಾರದ ಆಭರಣಗಳನ್ನು ದರಿಸಿಕೊಳ್ಳಲು ಚಿಂತನೆ ನಡೆಸತೊಡಗಿದ್ದಾರೆ. ಮಾಂಗಲ್ಯಸರವನ್ನು ಸಹ ಕೊರಳಲ್ಲಿ ಹಾಕಿಕೊಳ್ಳುವಬಗ್ಗೆ ಯೋಚಿಸುವ ಸ್ಥಿತಿ ಉಂಟಾಗಿದೆ. .

ದೂರು ನೀಡಿರುವ ಗೀತಾಲಕ್ಷ್ಮಿ 70 ಗ್ರಾಂನ ಒಂದು ಮಾಂಗಲ್ಯಸರ, 60ಗ್ರಾಂನ ನಾಲ್ಕು ಬಳೆ, 5ಗ್ರಾಂನ ಕಿವಿಓಲೆ, ಕಿಚನ್‌ಪರ್ಸ್‌ನಲ್ಲಿಟ್ಟಿದ್ದ 30ಗ್ರಾಂನ ಬಂಗಾರದ ಕರಿಮಣಿಸರ, 40ಗ್ರಾಂ ನಾಲ್ಕು ಬಳೆಗೆಗಳು, 5ಗ್ರಾಂನ ಉಂಗುರ, ಅತ್ತೆ ಸಾವಿತ್ರಮ್ಮನ ಮೈಮೇಲಿದ್ದ 60ಗ್ರಾಂನ ನಾಲ್ಕು ಬಳೆ, 40ಗ್ರಾಂನ ಸರ ಸೇರಿದಂತೆ ಒಟ್ಟು 310ಗ್ರಾಂ ತೂಕದ ಬಂಗಾರದ ಒಡವೆಗಳನ್ನು ದರೋಡೆಕೋರರು ಕಿತ್ತುಹೋಗಿದ್ದು, ಹೋಗುವ ಮುನ್ನ ಅತ್ತೆ ಸಾವಿತ್ರಮ್ಮನನ್ನು ಬಾತ್‌ರೂಂನಲ್ಲಿ ಪಿರ್ಯಾದಿ ಗೀತಾಲಕ್ಷ್ಮಿಯನ್ನು ಶೌಚಾಲಯದಲ್ಲಿ ಕೂಡಿಹಾಕಿ ಬಾಗಿಲುಹಾಕಿ ಮಧ್ಯಾಹ್ನ 12.30ರ ಸಮಯದಲ್ಲಿ ಮನೆಯಿಂದ ಹೊರಹೋಗಿದ್ದಾರೆ. ಒಂದು ಗಂಟೆಗಳ ಕಾಲ ಮನೆಯ ಒಳಗಡೆಯೇ ಇದ್ದು, ಇಬ್ಬರೂ ಮಹಿಳೆಯರಿಗೆ ಪ್ರಾಣಬೆದರಿಕೆ ಉಂಟು ಮಾಡಿದ್ದಾರೆ.

ಘಟನೆ ನಡೆದ ಸ್ಥಳದಲ್ಲಿ ಹೆಚ್ಚುವರಿ ರಕ್ಷಣಾಧಿಕಾರಿ ಕುಮಾರಸ್ವಾಮಿ, ಡಿವೈಎಸ್ಪಿ ರಾಜಣ್ಣ ನೇತೃತ್ವದಲ್ಲಿ ತಂಡಗಳನ್ನು ರಚಿಸಿದ್ದು, ದರೋಡೆಕೋರರನ್ನು ಪತ್ತೆಹಚ್ಚಲು ಪೊಲೀಸ್ ಇಲಾಖೆ ಕಾರ್ಯಚರಣೆ ಆರಂಭಿಸಿದೆ. ಜಿಲ್ಲೆಯಾದ್ಯಂತ ಪೊಲೀಸರು ದರೋಡೆಕೋರರ ಪತ್ತೆಗೆ ಬಲೆಬೀಸಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಪತ್ತೆಹಚ್ಚುವ ಆತ್ಮವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

## ಫಾಸ್ಟ್ ನ್ಯೂಸ್

### ಭೂಮಿ ಪೂಜೆ

» **ಚಿತ್ರದುರ್ಗ**

ನ್ಯಾಷನಲ್ ಹೈವೇ ಲಾಜಿಸ್ಟಿಕ್ ಮ್ಯಾನೇಜ್ಮೆಂಟ್ ಲಿಮಿಟೆಡ್ ಹಾಗೂ ಮೆ॥ ಸುಮಾರ್ಗ ಎಮಿನಿಟೀಜ ಪ್ರೈ. ಸಹಯೋಗದೊಂದಿಗೆ ಚಿತ್ರದುರ್ಗ ಜಿಲ್ಲಾ ಕೇಂದ್ರದ ಹೊರವಲಯದ ಮಲ್ಲಾಪುರ ಗ್ರಾಮದ ರಾಷ್ಟ್ರೀಯ ಹೆದ್ದಾರಿ48ರಲ್ಲಿ (ಹಳೇಹೆದ್ದಾರಿನಂ.4) ರಸ್ತೆ ಬದಿಯ ಮೂಲ ಸೌಕರ್ಯ ಹಾಗೂ ಸೌಲಭ್ಯಗಳನ್ನು ಒದಗಿಸುವ ಕಟ್ಟಡ ಕಾಮಗಾರಿಗಳಿಗೆ "ಭೂಮಿ ಪೂಜಾ ಸಮಾರಂಭ"ವು ಫೆ. 24ರ ಸೋಮವಾರ ಬೆಳ್ಳಿಗೆ 9 ಗಂಟೆಗೆ ನಡೆಯಲಿದೆ ಎಂದು ನಿರ್ದೇಶಕರಾದ ಉಮೇಶ್ ಮಹಾಬಳಶೆಟ್ಟಿ ತಿಳಿಸಿದ್ದಾರೆ. ಸಮಾರಂಭದ ದಿವ್ಯ ಸಾನಿಧ್ಯ ಶ್ರೀ ಕಬೀರಾನಂದ ಸ್ವಾಮೀಜಿ ಹಾಗೂ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಗೋವಿಂದ ಕಾರಜೋಳ, ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್, ಶಾಸಕರಾದ ಕೆ.ಸಿ.ವಿರೇಂದ್ರ ಪಪ್ಪಿ, ವಿಧಾನಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ನಗರಸಭೆ ಅಧ್ಯಕ್ಷರಾದ ಶ್ರೀಮತಿ ಸುಮಿತಾ ರಾಘವೇಂದ್ರ, ಗೋನೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಗುಂಡಮ್ಮ ಭಾಗವಹಿಸಲಿದ್ದಾರೆ.

### ಇಂದು ಲೇಸರ್ ಶಸ್ತ್ರಚಿಕಿತ್ಸಾ ಯಂತ್ರದ ಲೋಕಾರ್ಪಣೆ

» **ಚಿತ್ರದುರ್ಗ**

ನಗರದ ದವಳಗಿರಿ ಬಡಾವಣೆಯಲ್ಲಿನ ಕರ್ನಾಟಕ ಕಿವಿ, ಮೂಗು, ಗಂಟಲು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದವತಿಯಿಂದ ಮಧ್ಯ ಕರ್ನಾಟಕದಲ್ಲಿಯೇ ಪ್ರಪ್ರಥಮವಾದ ಕಿವಿ, ಮೂಗು, ಗಂಟಲು ಶಸ್ತ್ರಚಿಕಿತ್ಸೆಯ ಅತ್ಯಾಧುನಿಕ ತಂತ್ರಜ್ಞಾನದ ನಿಖರಾತಿ ನಿಖರ ಲೇಸರ್ ಶಸ್ತ್ರಚಿಕಿತ್ಸಾ ಯಂತ್ರದ ಲೋಕಾರ್ಪಣೆಯ ಸಮಾರಂಭವು ಫೆ. 24 ರ ಸೋಮವಾರ 11 ಗಂಟೆಗೆ ದವಳಗಿರಿ ಬಡಾವಣೆಯಲ್ಲಿನ ಬಸವ ಭವನದಲ್ಲಿ ನಡೆಯಲಿದೆ ಎಂದು ಕರ್ನಾಟಕ ಕಿವಿ, ಮೂಗು, ಗಂಟಲು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕರಾದ ಡಾ॥ ಎನ್.ಬಿ.ಪ್ರಹ್ಲಾದ್ ತಿಳಿಸಿದ್ದಾರೆ.ಈ ಕಾರ್ಯಕ್ರಮವನ್ನು ಸಂಸದರಾದ ಗೋವಿಂದ ಎಂ.ಕಾರಜೋಳ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್, ಶಾಸಕರಾದ ಕೆ.ಸಿ.ವಿರೇಂದ್ರ ಪಪ್ಪಿ, ಡಾ.ಎಂ. ಚಂದ್ರಪ್ಪ, ಟಿ.ರಘುಮೂರ್ತಿ, ಬಿ.ಜಿ.ಗೋವಿಂದಪ್ಪ, ಎನ್.ವೈ.ಗೋಪಾಲಕೃಷ್ಣ, ವಿಧಾನಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ಮಾಜಿ ಶಾಸಕರಾದ ಜಿ.ಎಚ್.ತಿಪ್ಪಾರೆಡ್ಡಿ, ಎಸ್.ಕೆ.ಬಸವರಾಜನ್, ಹೆಚ್. ಅಂಜನೇಯ, ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಆರ್.ಶಿವಣ್ಣ ಗಂಜಿಗಟ್ಟೆ,ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎಂ.ಕೆ.ತಾಜ್‌ಪೀರ್, ನಗರಸಭೆ ಅಧ್ಯಕ್ಷರಾದ ಶ್ರೀಮತಿ ಸುಮಿತಾ ರಾಘವೇಂದ್ರ, ಮಾಜಿ ಅಧ್ಯಕ್ಷರಾದ ಬಿ.ಕಾಂತರಾಜ್, ಶ್ರೀಮತಿ ಸುನೀತ ಮಲ್ಲಿಕಾರ್ಜುನ್, ಸದಸ್ಯರಾದ ಶ್ರೀಮತಿ ಲಕ್ಷ್ಮಮ್ಮ, ಐಎಂಎ ಅಧ್ಯಕ್ಷರಾದ ಡಾ.ಎಲ್.ಪಾಲಾಕ್ಷಯ್ಯ, ನಿವೃತ್ತ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ಜಗದೀಶ್, ಚಿತ್ರದುರ್ಗ ವಾಲ್ಮೀಕೀ ನಾಯಕ ನೌಕರರ ಕ್ಷೇಮಾಭೀವೃದ್ಧಿ ಸಂಘದ ಅಧ್ಯಕ್ಷರಾದ ಡಾ॥ಗುಡ್ಡದೇಶ್ವರಪ್ಪ, ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕರಾದ ಡಾ.ಎ.ಬಿ.ರಾಮಚಂದ್ರಪ್ಪ, ಜಿಲ್ಲಾ ಪತಂಜಲಿ ಯೋಗ ಸಮಿತಿ ಅಧ್ಯಕ್ಷರಾದ ಎಂ.ವಿ.ದೇವಾನಂದನಾಯ್ಕ್, ದೇವಾಲಯ ಸಂವರ್ಧನಾ ಸಮಿತಿ ಅಧ್ಯಕ್ಷರಾದ ಮಂಜುನಾಥ್ ಜಡೆಯಪ್ಪ ಮಠ, ಉದ್ಯಮಿಗಳಾದ ಸುರೇಶ್ ಬಾಬು, ಆರ್.ಎಎಸ್.ಗೀರೀಶ್, ಎಂ.ಶಂಕರ್, ಶಿವಸ್ವಾಮಿ ಆಗಮಿಸಲಿದ್ದಾರೆ ಎಂದು ತಿಳಿಸಿದ್ದಾರೆ.

### ಮಾಜಿ ವಾಯುಸೇನಾ ಯೋಧರ ವೈಯಕ್ತಿಕ ಕಡತಗಳ ಸಂರಕ್ಷಣೆ

» **ದಾವಣಗೆರೆ**

ನ್ಯಾಯಾಲಯದ ಪ್ರಕರಣಗಳಲ್ಲಿ ಭಾಗಿಯಾಗಿರುವ ಮಾಜಿ ವಾಯುಸೇನಾ ಯೋಧರ ವೈಯಕ್ತಿಕ ಕಡತಗಳನ್ನು ಹೊರತುಪಡಿಸಿ, ಬಾಕಿ ಮಾಜಿ ವಾಯುಸೇನಾ ಯೋಧರ ವೈಯಕ್ತಿಕ ಕಡತಗಳನ್ನು 25 ವರ್ಷಗಳ ಬದಲಾಗಿ ಕೇವಲ 5 ವರ್ಷಗಳು ಮಾತ್ರ ಸಂರಕ್ಷಿಸಲಾಗುವುದು. ತಮ್ಮ ವೈಯಕ್ತಿಕ ಕಡತಗಳ ಅವಶ್ಯಕತೆಯಿದ್ದರೆ ಜುಲೈ 10 ರೊಳಗಾಗಿ ವಾಯುಪಡೆ ದಾಖಲಾತಿ ಕಚೇರಿ ನವದೆಹಲಿ ದೂ.ಸಂ: 011–25687194, 5760, ಫ್ಯಾಕ್ಸ್ ಸಂ:011–25696552 ನ್ನು ಸಂಪರ್ಕಿಸಿ.

## ಫಾಸ್ಟ್ ನ್ಯೂಸ್

### ಫೆ.26ರಿಂದ ಪ್ರವಾಸಿ ಮೇಳ

» ಚಿತ್ರದುರ್ಗ

ಪ್ರವಾಸೋದ್ಯಮ ಇಲಾಖೆ ಹಾಗೂ ಕರ್ನಾಟಕ ಪ್ರವಾಸೋದ್ಯಮ ಸೊಸೈಟಿ ವತಿಯಿಂದ "ಕರ್ನಾಟಕ ಇಂಟರ್ ನ್ಯಾಷನಲ್ ಟ್ರಾವೆಲ್ ಎಕ್ಸ್‌ಪೋ-2025" ಕಾರ್ಯಕ್ರಮವನ್ನು ಇದೇ ಫೆ.26 ರಿಂದ 28 ರವರೆಗೆ ಬೆಂಗಳೂರು ಇಂಟರ್‌ನ್ಯಾಷನಲ್ ಕನ್‌ವೆನ್ಷನ್ ಸೆಂಟರ್‌ನಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಹೋಟೆಲ್ ಉದ್ದಿಮೆದಾರರು, ಟ್ರಾವೆಲ್ ಏಜೆನ್ಸಿ, ಹೋಂ-ಸ್ಟೇ, ಕರ-ಕುಶಲಮಳಿಗೆದಾರರು, ಪ್ರವಾಸೋದ್ಯಮ ಸ್ಟೇಕ್ಹೋಲ್ಡರ್‌ಗಳಿಗೆ ವ್ಯಾಪಾರ-ವಹಿವಾಟು ಮಾಡಿಕೊಳ್ಳಲು ಸುಮಾರು ನೂರಾರು ವಿದೇಶಿ ಸಂಸ್ಥೆಗಳು-ದೇಶದ ಎಲ್ಲಾ ಭಾಗದ ಪಾಲದಾರರ ಸಂಸ್ಥೆಗಳಿಗೆ ಬಿಸಿನೆಸ್ ಟು ಬಿಸಿನೆಸ್ ಭಾಗವಹಿಸುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿರುವ ಹೋಟೆಲ್ ಉದ್ದಿಮೆದಾರರು, ಟ್ರಾವೆಲ್ ಏಜೆನ್ಸಿ ಹೋಂ-ಸ್ಟೇ ಕರಕುಶಲ ಮಳಿಗೆದಾರರು, ಪ್ರವಾಸೋದ್ಯಮ ಸ್ಟೇಕ್ ಹೋಲ್ಡರ್‌ಗಳಿಗೆ ತಮ್ಮ ಉದ್ದಿಮೆಗಳನ್ನು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಐ ಸಂಸ್ಥೆಗಳೊಂದಿಗೆ ವ್ಯವಹಾರ ಮಾಡಲು ಸುವರ್ಣಾವಕಾಶ ಇರುತ್ತದೆ. ಈ ಕಾರ್ಯಕ್ರಮದಲ್ಲಿ ವ್ಯಾಪಾರ ಮಳಿಗೆಗಳನ್ನು ಕಾಯ್ದಿರಿಸಲು ಆಸಕ್ತಿ ಹೊಂದಿರುವ ಉದ್ದಿಮೆದಾರರು ಕೂಡಲೇ, ಚಿತ್ರದುರ್ಗ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಬಿ.ಹೆಚ್.ಶಶಿಕುಮಾರ್ ಅವರನ್ನು ಸಂಪರ್ಕಿಸಬಹುದು.ಹೆಚ್ಚಿನವಿವರಗಳಿಗೆಜಾಲತಾಣ https://www.karnatakatravelexpo.org ಮತ್ತು https://register.karnatakatravelexpo.org/ Users ಗೆ ಭೇಟಿ ನೀಡಿ ಮತ್ತು ಸಹಾಯಕ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಚಿತ್ರದುರ್ಗ ಕಛೇರಿ ಮೊಬೈಲ್ 9901948850, ಕಚೇರಿ ಸಂಖ್ಯೆ 08194-234466 ಗೆ ಸಂಪರ್ಕಿಸಬಹುದು.

### ಇಂದು ವಿದ್ಯುತ್ ಇರಲ್ಲ

» ಚಿತ್ರದುರ್ಗ

ನಗರ ಉಪ ವಿಭಾಗ ಘಟಕ-1 ರ ವ್ಯಾಪ್ತಿಯಲ್ಲಿ ಬರುವ ಎಫ್-2 ಕೆಳಗೋಟೆ ಮಾರ್ಗದ ನಗರಸಭೆ ವ್ಯಾಪ್ತಿಯ ರಸ್ತೆ ಬದಿಯಲ್ಲಿನ ಬೃಹಧಾಕಾರವಾದ ಮರವನ್ನು ತೆರವುಗೊಳಿಸಲು ಅಡ್ಡಲಾಗಿರುವ 11 ಕೆವಿ ಮಾರ್ಗಗಳನ್ನು ಬಿಚ್ಚಿ ಪುನಃ ಅಳವಡಿಸಬೇಕಾಗಿರುವುದರಿಂದ ಎಫ್-2 ಕೆಳಗೋಟೆ ಮುನ್ಸಿಪಲ್ ಕಾಲೋನಿ,ಭುವನೇಶ್ವರಿ ಸರ್ಕಲ್, ಕೆಳಗೋಟೆ, ಭೀಮಪ್ಪನಾಯಕ ರಸ್ತೆ, ಹೌಸಿಂಗ್ ಬೋರ್ಡ್ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.24 ರ ಸೋಮವಾರ ಬೆಳಿಗ್ಗೆ ಬೆಳಿಗ್ಗೆ 10 ರಿಂದ ಸಂಜೆ ಆರು ಗಂಟೆಯತನಕ ವಿದ್ಯುತ್ ಪೂರೈಕೆಯಿರುವುದಿಲ್ಲ. ಗ್ರಾಹಕರು ಸಹಕರಿಸುವಂತೆ ಚಿತ್ರದುರ್ಗ ಬೆ.ವಿ.ಕಂ.ನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

### ಹೊಸದುರ್ಗದಲ್ಲಿ ಇಂದು ಇ ಖಾತಾ ಅಭಿಯಾನಕ್ಕೆ ಶಾಸಕರಿಂದ ಚಾಲನೆ

» ಹೊಸದುರ್ಗ



ಫೆ.24 ರಂದು ಸೋಮವಾರ ಮದ್ಯಾಹ್ನ 1.30 ಕ್ಕೆ ಪಟ್ಟಣದ ಪುರಸಭಾ ಆವರಣದಲ್ಲಿ ಶಾಸಕ ಬಿ.ಜಿ.ಗೋವಿಂದಪ್ಪ ಅವರು ಇ ಖಾತಾ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ಪುರಸಭಾ ಮುಖ್ಯಾಧಿಕಾರಿ ತಿಮ್ಮರಾಜು ಜಿ.ವಿ.ತಿಳಿಸಿದ್ದಾರೆ.ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ಒಂದು ಕಾರ್ಯಕ್ರಮಕ್ಕೆ ಪುರಸಭಾ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ಅನಂದ್,ಉಪಾಧ್ಯಕ್ಷೆ ಶ್ರೀಮತಿ ಗೀತಾಆಸಂಧಿ ಸೇರಿದಂತೆ ಸರ್ವ ಪುರಸಭಾ ಸದಸ್ಯರುಗಳು ಭಾವವಹಿಸಲಿದ್ದು ಪಟ್ಟಣದ 23 ವಾರ್ಡಿನ ಎಲ್ಲಾ ಸಾರ್ವಜನಿಕರು ಆಸ್ತಿ ಮಾಲಿಕರು ತಮ್ಮ ತಮ್ಮ ದಾಖಲೆಗಳನ್ನ ಸಲ್ಲಿಸುವ ಮೂಲಕ ಈ ಅಭಿಯಾನದ ಯಶಸ್ವಿಗೆ ಕಾರಣವಾಗಬೇಕು ಮತ್ತು ಇದನ್ನು ಸದುಪಯೋಗ ಪಡಿಸಿಕೊಂಡು ಅಭಿಯಾನವನ್ನ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿರುವ ಅವರು ಮನೆ ಮನೆ ಬಾಗಿಲಿಗೆ ಸರ್ಕಾರ ಇರಲಿ ನಿಮ್ಮ ಸಹಕಾರ ಎಂಬ ಅಭಿಯಾನದಡಿಕರ್ನಾಟಕರಾಜ್ಯಸರ್ಕಾರಪಟ್ಟಣದ 23 ವಾರ್ಡುಗಳಲ್ಲಿ ಅನಧಿಕೃತ ಬಡಾವಣೆಗಳಲ್ಲಿ ಈಗಾಗಲೆ ಖಾತೆ ಹೊಂದಿರುವಂತಹ ಸ್ವತ್ತುಗಳಿಗೆ ಕಳೆದ 16 ವರ್ಷಗಳಿಂದ ಸ್ವತ್ತಿನ ಮಾಲಿಕರು ಪರದಾಡುವಂತಹ ಪರುಸ್ಥಿತಿಯನ್ನ ಮನಗಂಡು ರಾಜ್ಯ ಸರ್ಕಾರ ಒಂದು ಸಮಿತಿಯನ್ನು ರಚಿಸಿ ಫೆ.11 ರಿಂದ ಪ್ರಾರಂಭವಾಗುವಂತೆ ಮುಖ್ಯಮಂತ್ರಿಗಳು ಹಾಗೂ ಪೌರಳಿತ ಸಚಿವರಾದ ರಹೀಂಖಾನ್ ಅವರು ಈ ಒಂದು ಅಭಿಯಾನಕ್ಕೆ ಈಗಾಗಲೆ ಚಾಲನೆ ನೀಡಿದ್ದು ಈ ಅಭಿಯಾನದಡಿ ಅನಧಿಕೃತ ಬಡಾವಣೆಗಳಲ್ಲಿ ಈಗಾಗಲೆ ಖಾತೆ ಹೋಂದಿರುವಂತಹ ಎಲ್ಲಾ ಸ್ವತ್ತುಗಳಿಗೆ ಅತೀ ಕಡಿಮೆ ದಾಖಲೆಗಳನ್ನು ಸಲ್ಲಿಸಿ ಒಂದು ಭಾರಿಗೆ ದುಪ್ಪಟ ತೆರಿಗೆಯನ್ನ ಪಾವತಿಸುವ ಮೂಲಕ ಎಲ್ಲಾ ಸ್ವತ್ತುಗಳಿಗೆ ಇ ಖಾತಾ ಮತ್ತು ಬಿ ಖಾತಾ ಅಭಿಯಾನವನ್ನು ಪ್ರಾರಂಭಿಸಲಾಗಿದ್ದು ಆಸ್ತಿ ಮಾಲಿಕರು ಈ ಒಂದು ಸುವರ್ಣಾವಕಾಶವನ್ನು ಸದುಪಯೋಗ ಪಡಿಸಿಕೊಂಡು ಎಲ್ಲಾ ಆಸ್ತಿಗಳಿಗೆ ಇ ಖಾತಾ ಪಡೆಯುವ ಮೂಲಕ ಮತ್ತು ತೆರಿಗೆ ಪಾವತಿಸುವ ಮೂಲಕ ಪಟ್ಟಣದ ಸರ್ವತೋಮುಖ ಅಭಿವೃದ್ದಿಗೆ ಸಹಕಾರಿಯಾಗಬೇಕೆಂದು ಮನವಿ ಮಾಡಿರುವ ಅವರು ಈ ಅವಕಾಶವನ್ನು ಮೂರು ತಿಂಗಳವರೆಗೆ ಮಾತ್ರ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು.

# ಮಾತೃ ಹೃದಯ ಹೊಂದಿದವರು ಮಾತ್ರ ಸಂತರಾಗಲು ಸಾಧ್ಯ: ಡಾ.ಬಸವಕುಮಾರ ಶ್ರೀ

» ಚಿತ್ರದುರ್ಗ





ಚಿತ್ರದುರ್ಗದಲ್ಲಿಜಾತಿಗೊಂದುಮಠಗಳು ಇವೆ ಆದರೆ ಕಬೀರಾನಂದಾಶ್ರಮಕ್ಕೆ ಯಾವುದೆ ಜಾತಿ, ಧರ್ಮ ಇಲ್ಲದೆ ಎಲ್ಲರನ್ನು ಸಹಾ ಸಮಾನವಾಗಿ ನೋಡುವಂತ ಆಶ್ರಮ ಎಂದರೆ ಅದು ಕಬೀರಾನಂದಾಶ್ರಮವಾಗಿದೆ ಎಂದು ಚಿತ್ರದುರ್ಗದ ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಡಾ.ಬಸವಕುಮಾರ ಶ್ರೀಗಳು ತಿಳಿಸಿದರು.

ಚಿತ್ರದುರ್ಗ ನಗರದ ಕಬೀರಾನಂದ ಬಡಾವಣೆಯಲ್ಲಿನ ಕಬೀರಾನಂದಾಶ್ರಮದಲ್ಲಿ ನಿನ್ನೆಯಿಂದ ಪ್ರಾರಂಭವಾಗಿರುವ 95ನೇ ಶಿವರಾತ್ರಿ ಮಹೋತ್ಸವದ ಎರಡನೇ ದಿನವಾದ ಭಾನುವಾರ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಶಿವಲಿಂಗಾನಂದ ಶ್ರೀಗಳು ಮಾತೃ ಹೃದಯವನ್ನು ಹೊಂದಿದವರಾಗಿದ್ದಾರೆ. ತಾಯಿ ಹೃದಯವನ್ನು ಹೊಂದಿದವರು ಮಾರ ಸಂತರಾಗಲು ಸಾಧ್ಯವಿದೆ. ಎಲ್ಲರಿಗೂ ಸಹಾ ತಾಯಿ ಹೃದಯ ಬರುವುದಿಲ್ಲ, ಮಾನವರಾದವರು ಜೀವನದಲ್ಲಿ ಚಿಲ್ಲರೆ ವಿಷಯಗಳಿಗೆ ತಲೆಯನ್ನು ಕರಡಿಸಿಕೊಳ್ಳುತ್ತಾರೆ ಆದರೆ ಸಂತರಾದವರು ಮಾತ್ರ ಇದಕ್ಕೆ ಹೊರತು ಪಡಿಸಿ ದೊಡಡ್ ವಿಷಯಗಳಿಗೆ ಮಾತ್ರ ತೆಲೆಯನ್ನು ಕೆಡಿಸಿಕೊಂಡು ಅದರ ಪರಿಹಾರಕ್ಕೆ ಮುಂದಾಗುತ್ತಾರೆ ಎಂದರು.

ಚಿತ್ರದುರ್ಗದಲ್ಲಿ ನಡೆಯುವ ಶರಣ ಸಂಸ್ಕೃತಿ ಉತ್ಸವ ಹಾಗೂ ಶಿವರಾತ್ರಿ ಮಹೋತ್ಸವ ಮಹತ್ವವನ್ನು ಪಡೆದಿದೆ. ಶ್ರೀಗಳ ನಡೆ-ನುಡಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಲ್ಲವೂ ಸಹಾ ಒಂದೇ ಆಗಿದೆ. ಇದರಿಂದ ಮಠಗಳು ಅಭೀವೃದ್ದಿಯನ್ನು ಹೊಂದಿದೆ. ಶ್ರೀಗಳು ಸರಳ ಹಾಗೂ ಸೌಮ್ಯವಾಗಿದ್ದಾರೆ. ನಮ್ಮ ಚಿತ್ರದುರ್ಗದಲ್ಲಿ ಜಾತಿಗೊಂದು ಮಠಗಳು ಎಲ್ಲವು ಅವರ ಜಾತಿಯಿಂದ ಪ್ರಗತಿಯನ್ನು ಸಾಧಿಸುತ್ತಿದ್ದಾರೆ ಆದರೆ ಕಬೀರಾನಂದಾಶ್ರಮ ಯಾವುದೇ ಜಾತಿ, ಧರ್ಮಕ್ಕೆ ಸೀಮತವಾಗದೆ ಎಲ್ಲರನ್ನು ಸಹಾ ಒಂದೂ ಗೂಡಿಸಿಕೊಂಡು ಎಲ್ಲರನ್ನು ತಮ್ಮ ತಕ್ಕೆಗೆ ತೆಗೆದುಕೊಂಡು ಮುನ್ನಡೆಸುತ್ತಿದ್ದಾರೆ ಎಂದ ಶ್ರೀಗಳು ಗುರುವಿನ ಮಾತನ್ನು ಕೇಳಿದಾಗ ಜೀವನದಲ್ಲಿ ಉದ್ದಾರವಾಗಲು ಸಾಧ್ಯವಿದೆ. ಇದು ನಮ್ಮ ಬದುಕಿನಲ್ಲಿ ಪ್ರಗತಿಯನ್ನು ಹೊಂದಲು ಸಾಧ್ಯವಿದೆ. ಶ್ರೀಗಳು ಈ ರೀತಿಯಾದ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ವಾರ ಪೂರ್ತಿ ಶಿವನ ಸ್ಮರಣೆಯನ್ನು ಮಾಡಲು ಅವಕಾಶವಾಗಿದೆ ಎಂದು ಬಸವ ಕುಮಾರ್ ಶ್ರೀಗಳು ತಿಳಿಸಿದರು.

ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಮಾತನಾಡಿ, ನಾನು ಸಂಸದನಾಗಿದ್ದಾಗ ಇಲ್ಲದಿದ್ದಾಗಲೂ ಸಹಾ ಶ್ರೀಮಠ ನನ್ನನ್ನು ಉತ್ತಮವಾಗಿ ನೋಡಿಕೊಂಡಿದೆ ನನ್ನ ಹಾಗೂ ಮಠದ ಸಂಬಂಧ ಈಗಲೂ ಸಹಾ ಉತ್ತಮವಾಗಿದೆ, ಕಳೆದ 94 ವರ್ಷಗಳಿಂದ ನಿರಂತರವಾಗಿ ಈ ರೀತಿಯಾದ ಶಿವರಾತ್ರಿ ಮಹೋತ್ಸವ ನಡೆಸುತ್ತಾ ಬರಲಾಗಿದೆ. ಇಂದಿನ ದಿನಮಾನದಲ್ಲಿ ದೂರದರ್ಶನದಲ್ಲಿ ವೈಚಾರಿಕೆಗಿಂತ ಬೇರೆ ಬೇರೆ ಕಾರ್ಯಕ್ರಮಗಳು ಹೆಚ್ಚಾಗಿ ಪ್ರಚಾರವಾಗುತ್ತಿದೆ. ಇಂತಹ ಶಿವರಾತ್ರಿ ಮಹೋತ್ಸವಕ್ಕೆ ಜನ ಬರುವುದಿಲ್ಲ ಶ್ರೀಗಳು ಮಗುವಿನ ತಾಯಿ ಹೃದಯವನ್ನು ಹೊಂದಿದ್ದಾರೆ ಎಂದರು.

ಹಂಪಿಯ ಹೇಮಕೂಟದ ಶಿವರಾಮಾವಧೂತ ಆಶ್ರಮದ ಶ್ರೀ ವಿದ್ಯಾನಂದ ಭಾರತಿ ಶ್ರೀಗಳು ಮಾತನಾಡಿ, ಗುರುವಿನ ವಚನಾಮೃತಕ್ಕಿಂತ ಅಮೃತ ಬೇರ ಇಲ್ಲ, ಅಮೃತ ಎಂದರೆ ತಿನ್ನುವುದು, ಕುಡಿಯುವುದು ಅಲ್ಲ, ಇದು ಯಾವುದೇ ಒಂದು ವಸ್ತುವಿನಲ್ಲಿ ಇಲ್ಲ ಇದು ಇರುವುದು ಗುರುಗಳ ಅಮೃತ ವಾಣಿಯಲ್ಲಿದೆ. ಇದನ್ನು ಆಲಿಸುವುದರಿಂದ ಮುಕ್ತಿ ಸಿಗಲಿದೆ. ಗುರುವಿನಲ್ಲಿ ನಿಷ್ಠೆಯಿಂದ ಇದ್ದವರಿಗೆ ಮುಕ್ತಿ ಸಿಗಲಿದೆ. ಗುರುವಿನ ವಾಣಿಯನ್ನು ಆಲಿಸುವುದರಿಂದ ಮಾನವ ಜನ್ಮಕ್ಕೆ ಮುಕ್ತಿ ಸಿಗಲಿದೆ. ಗುರುವಿನಿಂದ ಕಲಿಯುವುದು ಹೆಚ್ಚಾಗಿದೆ. ಗುರುವಿನ ಗುಲಾಮನಾಗುವವರೆಗೂ ಮುಕ್ತಿ ದೂರಕುವುದಿಲ ಕತ್ತಲೆಯನ್ನು ಕಳೆಯುವುದು ಸೂರ್ಯ ಚಂದ್ರರಾದರೆ ಮಾನವನ ಜ್ಞಾನದ ಕತ್ತಲೆಯನ್ನು ಕಳೆಯುವುದು ಗುರುವಿನ ವಚನಾಮೃತವಾಗಿದೆ. ಗುರುಗಳು ವಚನವನ್ನು ಅಲಿಸಿದರೆ ದುಃಖ ದೂರವಾಗುತ್ತದೆ. ಪರಮಾತ್ಮನ ಸಂಗವನ್ನು ಗುರುವಿನ ಮೂಲಕ ಪಡೆಯಲು ಸಾಧ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಾಗಲಕೋಟೆಯ ಕೈಲಾಸನಾಥ್ ಶ್ರೀಗಳು, ಮಾಧವನಂದ ಶ್ರೀಗಳು ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಶ್ರೀಗಳು, ಶಿವಲಿಂಗಾನಂದ ಶ್ರೀಗಳು ಅದಿಜಾಂಬವ ನಿಗಮದ ಅಧ್ಯಕ್ಷರಾದ ಜಿ.ಎಸ್. ಮಂಜುನಾಥ್, ನಗರಸಭಾ ಆಧ್ಯಕ್ಷರಾದ ಶ್ರೀಮತಿ ಸುಮಿತ್ರ ರಾಘವೇಂದ್ರ, ಬಿಜೆಪಿ ಮುಖಂಡರಾದ ಶ್ರೀಮತಿ ರೇಖಾ, ಹೊದಿಗೆರೆ ರಮೇಶ್, ಜಿ.ಪಂ.ಮಾಜಿ ಅಧ್ಯಕ್ಷರಾದ ರಘುನಾಥ್, ಸೇರಿದಂತೆ ಇತರರು ಭಾಗವಹಿಸಿದ್ದರು.

ಸುಬ್ರಾಯ ಭಟ್ಟರು ವೇದ ಘೋಷ ಮಾಡಿದರೆ,ಶ್ರೀಮತಿ ಜ್ಯೋತಿ ಪ್ರಾರ್ಥಿಸಿದರೆ ಜೆಡಿಎಸ್, ಮಹಾ ಪ್ರಧಾನ ಕಾರ್ಯದರ್ಶಿ ಗೋಪಾಲಸ್ವಾಮಿ ನಾಯಕ್ ಸ್ವಾಗತಿಸಿದರು. ನಿವೃತ್ತ ಉಪನ್ಯಾಸಕರಾದ ಶ್ರೀಮತಿ ಸಿ.ಬಿ.ಶೈಲಾ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಸದ್ಗುರು ಕಬೀರಾನಂದಸ್ವಾಮಿ ವಿದ್ಯಾ ಪೀಠದ ಪ್ರಾಥಮಿಕ ಪ್ರೌಢ ಮತ್ತು ಅಂಗ್ಲ ಮಾಧ್ಯಮ ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

## ಪ್ರಜಾಪಿತಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ವತಿಯಿಂದ ಮೂರು ದಿನಗಳ ಕಾಲ ಶಿವನಾಮಸ್ಮರಣೆ ಕಾರ್ಯಕ್ರಮ

» ಚಳ್ಳಕೆರೆ



ಪ್ರತಿವರ್ಷದಂತೆ ಈ ವರ್ಷವೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮೂರು ದಿನಗಳ ಕಾಲ 89ನೇ ಶಿವರಾತ್ರಿ ಉತ್ಸವ ಹಬ್ಬವನ್ನು ಭಕ್ತಿ, ಶ್ರದ್ದೆಯಿಂದ ವಿವಿಧ ಹಂತದಲ್ಲಿ ಆಚರಿಸಲು ನಿರ್ಧರಿಸಿದ್ದು, ಶಿವಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿ ಶಿವನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಸಂಚಾಲಕಿ ಬಿ.ಕೆ.ವಿಮಲಕ್ಕ ತಿಳಿಸಿದರು.

ಅವರು, ಭಾನುವಾರ ಕಾರ್ಯಾಲಯದ ಆವರಣದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಶಿವರಾತ್ರಿ ಹಬ್ಬಕ್ಕೆ ತನ್ನದೇಯಾದ ವಿಶೇಷತೆ, ವೈವಿಧ್ಯತೆ ಇದೆ. ಕೇವಲ ತಮ್ಮ ದೇಶದ ಶಿವಭಕ್ತರು ಮಾತ್ರ ಶಿವನನ್ನು ಆರಾಧಿಸುತ್ತಿದ್ದರು. ಆದರೆ, ಈಗ ಶಿವರಾತ್ರಿ ಹಬ್ಬ ಅಂತರಾಷ್ಟ್ರೀಯ ಮಾನ್ಯತೆ ಪಡೆದಿದ್ದು, ಅಮೇರಿಕ, ದಕ್ಷಿಣಅಮೇರಿಕ, ಇರಾನ್, ಆಸ್ಟ್ರೀಯ, ಈಜೀಪಿಟ್, ಫ್ರಾನ್ಸ್, ಚೀನಾ, ಗ್ರೀಕ್, ಯುರೋಫ್‌ನಂತರ ಪಾಶ್ಚಿಮಾತ್ಯ ರಾಷ್ಟಗಳಲ್ಲೂ ಶಿವನ ಆರಾಧನೆ ನಡೆಯುತ್ತಿದೆ. ನಗರದಕ್ಷೇತ್ರಶಿಕ್ಷಣಾಧಿಕಾರಿಗಳಕಾರ್ಯಾಲಯದ ಆವರಣದಲ್ಲಿ ಫೆ.25ರ ಮಂಗಳವಾರ ಸಂಜೆ 6ಕ್ಕೆ ಶಿವರಾತ್ರಿ ಮಹೋತ್ಸವವನ್ನು ರೈತ ಸಶಕ್ತಿಕರಣ ಉತ್ಸವವಾಗಿ ಆಚರಣೆ ಮಾಡುತ್ತಿದ್ದು, ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ದಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿಕಾರ್ಯಕ್ರಮಉದ್ಘಾಟಿಸುವರು, ಜಂಟಿ ಕೃಷಿ ನಿರ್ದೇಶಕ ಬಿ.ಮಂಜುನಾಥ, ತಹಶೀಲ್ದಾರ್ ರೇಹಾನ್‌ಪಾಷ, ತೋಟಗಾರಿಕೆ ಅಧಿಕಾರಿ ವಿರೂಪಾಕ್ಷಪ್ಪ, ಸಹಾಯಕ ಕೃಷಿ ಅಧಿಕಾರಿ ಜೆ.ಅಶೋಕ್, ಪೌರಾಯುಕ್ತ ಎಚ್.ಜಿ.ಜಗರೆಡ್ಡಿ, ರೇಷ್ಮೆ ವಿಸ್ತರಣಾಧಿಕಾರಿ ಉಮಾಪತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಪ್ರತಿವರ್ಷದಂತೆ ಈ ವರ್ಷವೂ ಸಹ ಪ್ರದಕ್ಷಣೆಯ ಲಿಂಗದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಪ್ರತಿದಿನ ಸಂಜೆ6ರಿಂದ10ತನಕ ಭಕ್ತಾಧಿಗಳು ಲಿಂಗದರ್ಶನಕ್ಕೆ ಅವಕಾಶವಿದೆ. ಜ್ಯೋರ್ಲಿಂಗದರ್ಶನ, ಸ್ವಪರಿವರ್ತನೆಯ ಮಂಟಪ, ಪರಮಾತ್ಮನು ಸರ್ವವ್ಯಾಪಿಯೇ, ಆಧ್ಯಾತ್ಮಿಕ ಜಾದುಪ್ರದರ್ಶನ, ಶಿವನೊಂದಿಗೆ ಸ್ಪೇಲ್ಪಿ ಪಾಯಿಂಟ್ ವ್ಯವಸ್ಥೆ ಕಲ್ಪಿಸಿದೆ.

ಫೆ.26ರ ಬುಧವಾರ ಸಂಜೆ 6ಕ್ಕೆ ಆಧ್ಯಾತ್ಮಿಕ ಸಂಸ್ಕೃತಿ ಉತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ವಿವಿಧ ಶಾಲಾಮಕ್ಕಳಿಂದ ದೇವರನಾಮಸ್ಮರಣೆ, ಗೀತೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಫೆ.27ಗುರುವಾರ ಈಶ್ವರಿ ಅಭಿನಂದನಾಉತ್ಸವ ಹಾಗೂ ಮುಕ್ತಿ, ಜೀವನ್ಮುಕ್ತಿ ಪ್ರಪ್ತಿ ವಿಷಯ ಕುರಿತು ವಿಶೇಷ ಕಾರ್ಯಗಾರ ಹಾಗೂ ವಿವಿಧ ದೇವಸ್ಥಾನಗಳ ಪುರೋಹಿತರು, ಪೂಜಾರಿಗಳು, ಜೋಯಿಷರಿಗೆ ಈಶ್ವರಿಯ ಸನ್ಮಾನ, ಭಾರತೀಯ ಪರಂಪರೆಯನ್ನು ರಕ್ಷಿಸುತ್ತಿರುವ ಭಕ್ತಪರಂಪರೆಗೆ ಗೌರವಅರ್ಪಣೆ ಕಾರ್ಯಕ್ರಮವಿರಲಿದೆ.

## ಇ-ಖಾತಾ ಅಭಿಯಾನಕ್ಕೆ ಚಾಲನೆ



■ ಹಿರಿಯೂರು

ಇ-ಖಾತಾ ಅಭಿಯಾನ ಮತ್ತು ಸಹಾಯವಾಣಿ ಕೇಂದ್ರಕ್ಕೆ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಚಾಲನೆ ನೀಡಿದರು. ನಗರಸಭೆ ಆವರಣದಲ್ಲಿ ಶನಿವಾರ ಇ-ಆಸ್ತಿ ಕುರಿತು (ಪ್ರಾಪರ್ಟಿ ರಿಜಿಸ್ಟರ್ ಎ ಮತ್ತು ಪ್ರಾಪರ್ಟಿ ರಿಜಿಸ್ಟ್ ಬಿ) ತಯಾರಿಸುವ, ನಮೂನೆ-3 ಮತ್ತು ನಮೂನೆ-3ಎ ಸೃಜಿಸಲು ಅನುವಾಗುವಂತೆ ಹಿರಯೂರು ನಗರಸಭೆ ವ್ಯಾಪ್ತಿಯಲ್ಲಿ ಪ್ರಾಪರ್ಟಿ ರಿಜಿಸ್ಟರ್ □ಎ ಮತ್ತು ಬಿನಲ್ಲಿ ಆಸ್ತಿಗಳಿಗೆ ನೀಡಿರುವ ನಿರ್ದೇಶನದಂತೆ ಹಿರಿಯೂರು ನಗರಸಭೆ ವತಿಯಿಂದ ಇ-ಖಾತಾ ಅಭಿಯಾನ ಏರ್ಪಡಿಸಲಾಗಿದ್ದು, ಇ-ಖಾತಾ ಅಭಿಯಾನ ಮತ್ತು ಸಹಾಯವಾಣಿ ಕೇಂದ್ರಕ್ಕೆ ಸಚಿವರು ಚಾಲನೆ ನೀಡಿದರು. ಹಿರಿಯೂರು ನಗರಸಭೆ ವ್ಯಾಪ್ತಿಯ ವಾರ್ಡ್ ನಂ.1, 2, 3 ಮತ್ತು 4ರಲ್ಲಿ ನಮೂನೆ-3 (ಎ-ರಿಜಿಸ್ಟರ್) ಮತ್ತು ನಮೂನೆ-3ಎ (ಬಿ-ರಿಜಿಸ್ಟರ್)ಗಳ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಅಭಿಯಾನದಲ್ಲಿ ನಗರಸಭೆ ಅಧ್ಯಕ್ಷ ಅಜಯ್ ಕುಮಾರ್, ಉಪಾಧ್ಯಕ್ಷೆ ಅಂಬಿಕಾ, ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ್ ಕುಮಾರ್, ಸದಸ್ಯರಾದ ಜಿ.ಎಸ್.ತಿಪ್ಪೇಸ್ವಾಮಿ, ಎಸ್.ಶಿವರಂಜನಿ, ಚಿತ್ರಜಿತ್ ಯಾದವ್ ಸೇರಿದಂತೆ ಪೌರಾಯುಕ್ತರು ಹಾಗೂ ಕಚೇರಿ ಸಿಬ್ಬಂದಿ ಇದ್ದರು.

## ಪ್ರಮುಖ ಸುದ್ದಿ

### ನಾರಾಯಣಪುರ: ಸೇವಂತಿ ಬೆಳೆ ಕ್ಷೇತ್ರೋತ್ಸವ

# ರೈತರು ಸಾವಯವ, ಜೀವಾಮೃತ ಬಳಸಿ ಹೆಚ್ಚು ಲಾಭಗಳಿಸಿ

» ಚಳ್ಳಕೆರೆ



ತಾಲ್ಲೂಕಿನ ಬೆಳೆಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾರಾಯಣಪುರ ಗ್ರಾಮದ ಸಿದ್ದಮ್ಮ ಸೇರಿದ ಐದು ಎಕರೆ ಜಮೀನಿನಲ್ಲಿ ನಿರೀಕ್ಷೆಗೂ ಮೀರಿದ ಸೇವಂತಿ ಬೆಳೆಯನ್ನು ಬೆಳೆದು ಆರ್ಥಿಕವಾಗಿ ಮುನ್ನಡೆ ಸಾಧಿಸಿದ ಹಿನ್ನೆಲೆಯಲ್ಲಿ ಅವರ ಜಮೀನಿನಲ್ಲಿ ತೋಟಗಾರಿಕೆಇಲಾಖೆಸಹಯೋಗದೊಂದಿಗೆ ಸೇವಂತಿಹೂಕ್ಷೇತ್ರೋತ್ಸವಕಾರ್ಯಕ್ರಮವನ್ನು ನಡೆಸಲಾಯಿತು.

ಬಬ್ಬೂರು ಕೃಷಿ ವಿಜ್ಞಾನ ಓಂಕಾರಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ತಾಲ್ಲೂಕಿನಾದ್ಯಂತಸುಮಾರು350ಎಕರೆಯಲ್ಲಿ ಹೂ ಬೆಳೆಯನ್ನು ಬೆಳೆಯಲಾಗಿದೆ. ಆದರೆ, ನಾರಾಯಣಪುರ ಗ್ರಾಮದ ಸಿದ್ದಮ್ಮನವರ ಜಮೀನಿನಲ್ಲಿ ಅವರ ಪುತ್ರ ಮೌನೇಶ್ ಸಹಕಾರದೊಂದಿಗೆ ಹೆಚ್ಚು ಬೆಳೆಯನ್ನು ಬೆಳೆಯುವ ಮೂಲಕ ಹೂಬೆಳೆಗಾರರಿಗೆ ಮಾರ್ಗದರ್ಶಕರಾಗಿದ್ದಾರೆ. ಪ್ರತಿನಿತ್ಯ 10 ಕ್ವಿಂಟಾಲ್ ಸೇವಂತಿ ಹೂವನ್ನು ಮಾರಾಟ ಮಾಡಲಾಗುತ್ತಿದೆ. ಸರಾಸರಿ ಪ್ರತಿದಿನ 10ಸಾವಿರ ಮೌಲ್ಯದ ಹೂಗಳ ಮಾರಾಟ ನಡೆಸುತ್ತಿದೆ. 20ಕ್ಕೂ ಹೆಚ್ಚು ಕಾರ್ಮಿಕರು ತೋಟದಲ್ಲಿ ಕಾರ್ಯನಿರ್ವಹಿಸುತ್ತಾರೆ. ಈ ಬಾರಿ ತಾಲ್ಲೂಕಿನಾದ್ಯಂತ ಹೂವಿನ ಬೆಳೆ ಉತ್ತಮವಾಗಿದೆ. ಹೂವಿನಲ್ಲೂ ಉತ್ತಮ ಬೆಳೆ ಬೆಳೆಯಲು ಸಾವಯವ ಗೊಬ್ಬರ ಮತ್ತು ಜೀವಾಮೃತವನ್ನು ರೈತರು ಹೆಚ್ಚು ಬಳಸಬೇಕು. ಇದರಿಂದ ರೈತರಿಗೆ ಅಧಿಕ ಲಾಭವಾಗಲಿದೆ ಎಂದರು. ಹಿರಿಯ ತೋಟಗಾರಿಕೆ ಅಧಿಕಾರಿ ವಿರೂಪಾಕ್ಷಪ್ಪ ಮಾತನಾಡಿ, ಬಯಲುಸೀಮೆಯ ಈ ಬೆಂಗಾಡಿನಲ್ಲಿ ಬಿಸಿಲಿನಲ್ಲಿ ರೈತರು ಕೆಲಸ ನಿರ್ವಹಿಸುವುದೇ ಕಷ್ಟವಾದ ಸಂದರ್ಭದಲ್ಲಿ ಸಿದ್ದಮ್ಮ ಮತ್ತು ಅವರ ಪುತ್ರ ಬೆಳಗ್ಗೆಯಿಂದ ಸಂಜೆವರೆಗೂ ಕೂಲಿಯವರ ಜೊತೆಗೆ ಜಮೀನಿನಲ್ಲಿ ಸೇವಂತಿ ಬೆಳೆಯನ್ನು ಆರೈಕೆ ಮಾಡುತ್ತಿದ್ದು, ಉತ್ತಮ ಲಾಭದತ್ತ ಹೆಜ್ಜೆ ಇಟ್ಟಿದ್ದಾರೆ. ಸೇವಂತಿಯನ್ನು ಹೊರತು ಪಡಿಸಿದರೆ ತಾಲ್ಲೂಕಿನಾದ್ಯಂತ ಸುಮಾರು 350 ಹೆಕ್ಟೇರ್ ಪ್ರದೇಶದಲ್ಲಿ ಹೂವಿನ ಬೆಳೆ ಇದೆ. ರೈತ ಹೂ ಬೆಳೆಯನ್ನು ಬೆಳೆದು ಲಾಭಪಡೆಯಬದು. ಪ್ರತಿಯೊಬ್ಬ ರೈತರು ತಮ್ಮ ಬೆಳೆಯ ಬಗ್ಗೆ ಕೃಷಿ ವಿಜ್ಞಾನಿಗಳಿಂದ ಸೂಕ್ತ ಮಾರ್ಗದರ್ಶನ ಪಡೆಯಿರಿ ಎಂದರು.

ಇದೇ ಸಂದರ್ಭದಲ್ಲಿ ಸೇವಂತಿ ಬೆಳೆಗಾರರಾದ ಸಿದ್ದಮ್ಮ, ಮೌನೇಶ್‌ರವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ತೋಟಗಾರಿಕೆ ಅಧಿಕಾರಿಗಳಾದ ಪ್ರವೀಣ್‌ಕುಮಾರ್, ವೀರೇಶ್, ರೈತರಾದ ಪ್ರಸನ್ನ, ಸಿದ್ದೇಶ್, ಪ್ರಹ್ಲಾದ್, ಮಂಜುನಾಥ, ಬಿ.ವಿ.ಸತ್ಯನಾರಾಯಣ, ಜಿ.ಗೋವಿಂದಪ್ಪ, ರಾಮಕೃಷ್ಣಪ್ಪ ಮುಂತಾದವರು ಉಪಸ್ಥಿತರಿದ್ದರು.

"

ಸೇವಂತಿ ಹೂವಿನಲ್ಲಿ ಹೆಚ್ಚುಲಾಭವಿಲ್ಲವೆಂದು ಬಹಳಷ್ಟು ರೈತರು ಮಾತನಾಡುತ್ತಿದ್ದರು. ಆದರೆ, ನನಗೆ ಕೇವಲ ಮೂರು ಎಕರೆ ಜಮೀನಿದೆ, ಹೆಚ್ಚುವರಿಯಾಗಿ ಎರಡು ಎಕರೆ ಜಮೀನನ್ನು ಕೋರಿಗೆ ಪಡೆದು ಒಟ್ಟು ಐದು ಎಕರೆ ಪ್ರದೇಶದಲ್ಲಿ ಸೇವಂತಿ ಬೆಳೆ ಬೆಳೆದೆ. ಇಡೀ ಕುಟುಂಬ ನನ್ನಗೆ ಆಸರೆಯಾಯಿತು. ಅಧಿಕಾರಿಗಳು ಮಾರ್ಗದರ್ಶನ ನೀಡಿದರು. ಪ್ರತಿನಿತ್ಯ ಈಗ 10 ಕ್ವಿಂಟಾಲ್ ಹೂಗಳನ್ನು 100ರೂ ಕೆಜಿಯಂತೆ ಮಾರುಕಟ್ಟೆಗೆ ಕಳಿಸಲಾಗುತ್ತದೆ. ದಿನಾಲು 10 ಸಾವಿರ ವರಮಾನ ಬರುತ್ತಿದೆ. ಸೇವಂತಿ ಬೆಳೆ ಆರ್ಥಿಕವಾಗಿ ನನ್ನನ್ನು ಸದೃಢಗೊಳಿಸಿದೆ.

» **ಸಿದ್ದಮ್ಮ ರೈತ ಮಹಿಳೆ**

## ಫಾಸ್ಟ್ ನ್ಯೂಸ್

### ಕೊಪ್ಪಳದಲ್ಲಿ ರಾಜ್ಯ ಸರ್ವ ಸದಸ್ಯರ ಸಭೆ

» ದಾವಣಗೆರೆ

ಕೊಪ್ಪಳ ನಗರದ ಪಾನಗಂಟಿ ಕಲ್ಯಾಣ ಮಂಟಪದಲ್ಲಿ ಮಾರ್ಚ್ 9 ಭಾನುವಾರದಂದು ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ 2023 –24ನೇ ಸಾಲಿನ 91ನೇ ಸರ್ವಸದಸ್ಯರ ಮಹಾಸಭೆ ನಡೆಯಲಿದೆ ಎಂದು ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ ತಿಳಿಸಿದ್ದಾರೆ. ಕರ್ನಾಟಕ ಕಾರ್ಯಾನಿರತಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ್ ತಗಡೂರು ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ಹಿಂದಿನ ನಡಾವಳಿಗಳನ್ನು ಓದಿ ಅನುಮೋದಿಸುವುದು 23 24 ನೇ ಸಾಲಿನ ವಾರ್ಷಿಕ ವರದಿ ಮಂಡನೆಯನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಸಿ.ಲೋಕೇಶ್ ಮಂಡಿಸಲಿದ್ದಾರೆ. ಅನುಮೋದನೆ ಲೆಕ್ಕ ಪರಿಶೋಧನಾ ವರದಿ ಮಂಡನೆ ಅನುಮೋದನೆ ಸಂಘದ ಚುನಾವಣೆ ಕುರಿತು ಸೇರಿದಂತೆ ವಿವಿಧ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು. ಸಭೆಯಲ್ಲಿ ವಿಷಯ ಪ್ರಸ್ತಾಪಿಸಲು ಇಚ್ಚಿಸುವ ಸಂಘದ ಸದಸ್ಯರು ವಿಷಯ ಸೂಚಿಯನ್ನು ಲಿಖಿತವಾಗಿ ಫೆಬ್ರವರಿ 28ರ ವರೆಗೆ ರಾಜ್ಯ ಸಂಘಕ್ಕೆ ಕಳಿಸಿಕೊಡಬೇಕು ಸರ್ವ ಸದಸ್ಯರ ಮಹಾಸಭೆಯಲ್ಲಿ ಭಾಗವಹಿಸುವರು. 24 25 ನೇ ಸಾಲಿನ ಸಂಘದ ಗುರುತಿನ ಚೀಟಿ ತರುವುದು ಕಡ್ಡಾಯವಾಗಿರುತ್ತದೆ. ದಾವಣಗೆರೆ ಜಿಲ್ಲೆಯ ಪತ್ರಕರ್ತರ ಸಂಘದ ಸರ್ವ ಸದಸ್ಯರು ತಪ್ಪದೆ ಮಹಾಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಫಕ್ರುದ್ದೀನ್ ತಿಳಿಸಿದ್ದಾರೆ

### ರಾಜಕಾಲುವೆ ಕಾಮಗಾರಿ ವೀಕ್ಷಿಸಿದ ಪುರಸಭಾ ಅಧ್ಯಕ್ಷೆ, ಮುಖ್ಯಾಧಿಕಾರಿ



» ಹೊಸದುರ್ಗ

ನಗರೋತ್ತನ್ನ ಹಂತ 4 ರ ಯೋಜನೆಯ ಅಡಿಯಲ್ಲಿ ಪಟ್ಟಣದ ಪ್ರಮುಖ ರಸ್ತೆಯಾದ ಹಿರಿಯೂರು ಸರ್ಕಲ್ ನಿಂದ ಮಟನ್ ಮಾರ್ಕೆಟ್ ಮುಂಭಾಗ ಮತ್ತು ತೋಟಗಾರಿಕೆ ಇಲಾಖೆಯ ಪಕ್ಕದವರೆಗೆ ರಾಜ ಕಾಲುವೆಯ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದನ್ನು ಭಾನುವಾರ ಪುರಸಭಾ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿಆನಂದ್ ಮತ್ತು ಮುಖ್ಯಾಧಿಕಾರಿ ತಿಮ್ಮರಾಜು ಜೆ.ವಿ. ಸತತ ನಾಲ್ಕು ಗಂಟೆಗಳ ಕಾಲ ಕಾಮಗಾರಿಯನ್ನ ವೀಕ್ಷಿಸಿ ಪರಿಶೀಲಿಸಿದರು.ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪುರಸಭಾ ಮುಖ್ಯಾಧಿಕಾರಿ ತಿಮ್ಮರಾಜು ಜೆ.ವಿ. ಪಟ್ಟಣದ ವ್ಯಾಪ್ತಿಯಲ್ಲಿ ನಗರೋತ್ತನ ಹಂತ 4 ರ ಅಡಿಯಲ್ಲಿ ವಿವಿಧ ಕಾಮಗಾರಿಗಳಿಗೆ ಶಾಸಕ ಬಿ.ಜಿ.ಗೋವಿಂದಪ್ಪ ಅವರು ಸುಮಾರು 4.5 ಕೋಟಿ ರೂ ವೆಚ್ಚಕ್ಕೆ ಕಳೆದ ಒಂದು ತಿಂಗಳ ಹಿಂದೆ ವಿವಿಧ ಕಾಮಗಾರಿಗಳಿಗೆ ಪಟ್ಟಣದ 23 ವಾರ್ಡುಗಳಿಗೆ ಚಾಲನೆ ನೀಡಿದ್ದರು.ಸದರಿ ಕಾಮಗಾರಿಗಳು ನಡೆಯುತ್ತಿದ್ದು ಕಾಮಗಾರಿಗಳು ನಡೆಯುತ್ತಿರುವ ಸ್ಥಳಗಳಿಗೆ ಅಧ್ಯಕ್ಷರು ಮತ್ತು ಅಭಿಯಂತರರೊಂದಿಗೆ ( ಇಂಜಿನಿಯರ್) ಬೇಟಿ ನೀಡಿ ಕಾಮಗಾರಿಗಳನ್ನ ಪರಿಶೀಲಿಸಿ ಗುತ್ತಿಗೆದಾರರಿಗೆ ಉತ್ತಮ ಗುಣ ಮಟ್ಟದ ಕಾಮಗಾರಿ ಮಾಡುವಂತೆ ಸೂಚಿಸಲಾಗಿದೆ ಎಂದರು. ಪಟ್ಟಣದ 23 ವಾರ್ಡುಗಳಲ್ಲೂ ಸಹಾ ಸಮರೋಪಾದಿಯಲ್ಲಿ ಕಾಮಗಾರಿಗಳನ್ನ ಕೈಗೊಳ್ಳಲಾಗುತ್ತಿದ್ದುಸಾರ್ವಜನಿಕರಅನುಕೂಲಕ್ಕಾಗಿ ರಸ್ತೆ ಮತ್ತು ಚರಂಡಿಗಳು ಬಹು ಮುಖ್ಯವಾಗಿದ್ದು ಇವುಗಳ ನಿರ್ವಹಣೆ ಮತ್ತು ಕಾಮಗಾರಿಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಪುರಸಭೆಯಿಂದ ಎಲ್ಲಾ ಕ್ರಮಗಳನ್ನ ಅನುಸರಿಸಲಾಗುತ್ತಿದ್ದು ಎಸ್.ಎಸ್.ವಿಶೇಷ ಅನುದಾನ ಹಾಗೂ ನಗರೋತ್ತನ್ನ ಹೆಚ್ಚುವರಿ ಅನುದಾನದಲ್ಲಿ ಶಾಸಕರಾದ ಬಿ.ಜಿ.ಗೋವಿಂದಪ್ಪನವರು 20 ಕೋಟಿ ಅನುದಾನವನ್ನು ಹೆಚ್ಚುವರಿಯಾಗಿ ಪಟ್ಟಣದ ಅಭಿವೃದ್ದಿಗಾಗಿ ಮಂಜೂರು ಮಾಡಿಸುವ ಮೂಲಕ ಹೆಚ್ಚಿನ ಅಭಿವೃದ್ದಿಯನ್ನ ಮಾಡಲು ಕ್ರಮ ವಹಿಸಲಾಗುತ್ತಿದೆ ಎಂದರು.23 ವಾರ್ಡುಗಳಲ್ಲಿ ನಗರೋತ್ತನ್ನ ಹಂತ 4 ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಪ್ರತಿನಿತ್ಯ ಸ್ಥಳ ಪರಿಶೀಲಿಸಿ ಅಲ್ಲಿನ ಕಾಮಗಾರಿಗಳ ಗುಣ ಮಟ್ಟ ಕಾಪಾಡುವ ನಿಟ್ಟಿನಲ್ಲಿ ಸಲಹೆ ಸೂಚನೆಗಳನ್ನ ನೀಡಲಾಗುತ್ತಿದೆ ಮತ್ತು ಪಟ್ಟಣದ ಪ್ರಮುಖ ರಸ್ತೆಯಲ್ಲಿರುವಂತಹ ಡಿವೈಡರ್ ನಿರ್ಮಣ ಮತ್ತು ವಿಶೇಷವಾಗಿ ಅತ್ಯಾಧುನಿಕ ವಿದ್ಯುತ್ ದೀಪಗಳನ್ನ ಅಳವಡಿಸಲು 15 ನೇ ಹಣಕಾಸು ಯೋಜನೆಯಡಿಯಲ್ಲಿ ಸುಮಾರು 50 ಲಕ್ಷಕ್ಕೆ ಅನುಮೋದನೆ ನೀಡಲಾಗಿದ್ದು ಶಾಸಕರ ನೇತೃತ್ವದಲ್ಲಿ ಮತ್ತು ಪುರಸಭಾ ಸರ್ವ ಸದಸ್ಯರುಗಳ ಸಮ್ಮುಖದಲ್ಲಿ ತುರ್ತಾಗಿ ಪೂಜೆ ಸಲ್ಲಿಸಿ ಕಾಮಗಾರಿಯನ್ನ ಪ್ರಾರಂಭಿಸಲಾಗುವುದು ಎಂದರು.

### ನೇಮಕಾತಿ ರದ್ದು

» ದಾವಣಗೆರೆ

ಹರಿಹರ ತಾಲ್ಲೂಕಿನ ಶಿಶು ಅಭಿವೃದ್ದಿ ಯೋಜನೆಯ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಹುದ್ದೆಗಳಿಗೆ ನೇಮಕಾತಿಯನ್ನು ಭೌತಿಕವಾಗಿ (ಆಫ್‌ಲೈನ್) ಮುಖಾಂತರ ಆಹ್ವಾನಿಸದ ಅರ್ಜಿಗಳ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ ಎಂದು ಶಿಶು ಅಭಿವೃದ್ದಿ ಯೋಜನಾಧಿಕಾರಿ ತಿಳಿಸಿದ್ದಾರೆ.

# ನಿರಂತರ ವಿದ್ಯುತ್ ಪೂರೈಕೆಗೆ ಸರ್ಕಾರದ ಸಂಕಲ್ಪ

» ಚಿತ್ರದುರ್ಗ

ರಾಜ್ಯದ ರೈತರಿಗೆ ಗುಣಮಟ್ಟದ ನಿರಂತರ ವಿದ್ಯುತ್ ಪೂರೈಕೆಗೆ ರಾಜ್ಯ ಸರ್ಕಾರ ಸಂಕಲ್ಪ ಮಾಡಿದೆ ಎಂದು ಯೋಜನಾ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್ ಹೇಳಿದರು.

ಇಂಧನ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳಲ್ಕೆರೆ ತಾಲ್ಲೂಕು ಅರಸನಘಟ್ಟ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ 66/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.



ನಮ್ಮ ಸರ್ಕಾರ 2023ರ ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಪೂರೈಸಿರುವುದರ ಜೊತೆಗೆ ರಾಜ್ಯ ರೈತರಿಗೆ ಗುಣಮಟ್ಟದ ನಿರಂತರ ವಿದ್ಯುತ್ ಪೂರೈಕೆಗೆ ಸಂಕಲ್ಪ ಮಾಡಿದೆ. ರಾಜ್ಯದಲ್ಲಿ ಎಲ್ಲಿಯೂ ಲೋಡ್ ಶೆಡ್ಡಿಂಗ್ ಇಲ್ಲ. ಓವರ್ ಲೋಡ್ ಆಗಿರುವ ಕಡೆ ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ ಮಾಡುವ ಮೂಲಕ ಹೆಚ್ಚಿನ ಶಕ್ತಿ ತುಂಬವ ಕೆಲಸ ಮಾಡಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ನಿರಂತರವಾಗಿ 7 ಗಂಟೆ ವಿದ್ಯುತ್ ಪೂರೈಕೆಮಾಡಲಾಗುತ್ತಿದ್ದು, ಅಡಚಣೆ ಇರುವ ಕಡೆ 5ರಿಂದ 6 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಅರಸನಘಟ್ಟ ವಿದ್ಯುತ್ ಉಪಕೇಂದ್ರ ಪ್ರಾರಂಭದಿಂದಾಗಿ ಅರಸನಘಟ್ಟ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಿಗೆ ಗುಣಮಟ್ಟದ ನಿರಂತರ ವಿದ್ಯುತ್ ಸರಬರಾಜು ಆಗಲಿದೆ ಎಂದು ಹೇಳಿದರು.

**ಜಿಲ್ಲೆಯಲ್ಲಿ 25 ವಿದ್ಯುತ್ ಉಪಕೇಂದ್ರಗಳ ನಿರ್ಮಾಣಕ್ಕೆ ಗುದ್ದಲಿಪೂಜೆ:** ಜಿಲ್ಲೆಯಲ್ಲಿ ಸಂಪೂರ್ಣವಾಗಿ ವಿದ್ಯುತ್ ಕೊರತೆ ನೀಗಿಸುವ ನಿಟ್ಟಿನಲ್ಲಿ ಪ್ರಸಕ್ತ ವರ್ಷವೇ ಜಿಲ್ಲೆಗೆ ಅವಶ್ಯ ಇರುವ 25 ವಿದ್ಯುತ್ ಉಪಕೇಂದ್ರಗಳನಿರ್ಮಾಣಕ್ಕೆಗುದ್ದಲಿಪೂಜೆ ಮಾಡಿ, ಮುಂದಿನ ಒಂದು ವರ್ಷದೊಳಗೆ ಲೋಕಾರ್ಪಣೆಗೊಳಿಸಲಾಗುವುದು ಎಂದು ಸಚಿವ ಡಿ.ಸುಧಾಕರ್ ಭರವಸೆ ನೀಡಿದರು.

ಇಂಧನ ಸಚಿವರು ಈಚೆಗೆ ಜಿಲ್ಲೆಗೆ ಭೇಟಿ ನೀಡಿ, ಜಿಲ್ಲೆಯ ರೈತರ ಸಮಸ್ಯೆಗಳನ್ನು ಆಲಿಸಿದ್ದಾರೆ. ರೈತರಿಗೆ ವಿದ್ಯುತ್ ತೊಂದರೆಯಾಗದಂತೆ ಈಗಾಗಲೇ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದು ತಿಳಿಸಿದ ಅವರು, ಹೊಳಲ್ಕೆರೆ ತಾಲ್ಲೂಕಿನಲ್ಲಿ 5 ವಿದ್ಯುತ್ ಉಪಕೇಂದ್ರ, ಚಿತ್ರದುರ್ಗ–5, ಚಳ್ಳಕೆರೆ–2, ಮೊಳಕಾಲ್ಮುರು –2, ಹೊಸದುರ್ಗ–7 ಹಾಗೂ ಹಿರಿಯೂರು ತಾಲ್ಲೂಕಿನಲ್ಲಿ 4 ವಿದ್ಯುತ್ ಉಪಕೇಂದ್ರಗಳ ಬೇಡಿಕೆ ಸೇರಿದಂತೆ ಜಿಲ್ಲೆಯಲ್ಲಿ 25 ವಿದ್ಯುತ್ ಉಪಕೇಂದ್ರಗಳ ಬೇಡಿಕೆ ಇದ್ದು, ಇದರ ಜೊತೆಗೆ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವ ಕೆಲಸವನ್ನು ಸರ್ಕಾರ ಪ್ರಮಾಣಿಕವಾಗಿ ಮಾಡಲಿದೆ. ರೈತರಿಗೆ ಪ್ರತಿ ವರ್ಷ 19 ಸಾವಿರ ಕೋಟಿ ಹಣವನ್ನು ಸರ್ಕಾರ ಸಬ್ಸಿಡಿ ನೀಡುತ್ತಿದೆ. ಇದರ ಜೊತೆಗೆ ನಿರಂತರ ಜ್ಯೋತಿಗೂ ಸಾವಿರಾರು ಕೋಟಿ ಅನುದಾನ ನೀಡುತ್ತಿದೆ ಎಂದು ಹೇಳಿದರು.

**ಹಣದಬದಲುಅಕ್ಕಿ:**ಅನ್ನಭಾಗ್ಯಯೋಜನೆಯ ಪಡಿತರ ವಿತರಣಾ ವ್ಯವಸ್ಥೆಯಡಿ ಇದೇ ತಿಂಗಳಿಂದ ಹಣದ ಬದಲು ಪೂರ್ಣ ಪ್ರಮಾಣದಲ್ಲಿ ಪ್ರತಿ ಫಲಾನುಭವಿಗೆ 10 ಕೆ.ಜಿ.ಅಕ್ಕಿ ವಿತರಣೆ ಮಾಡಲಾಗುವುದು ಎಂದು ಸಚಿವ ಡಿ.ಸುಧಾಕರ್ ತಿಳಿಸಿದರು.

ಎರಡು ತಿಂಗಳಿಂದ ಬಾಕಿ ಇರುವ ಗೃಹಲಕ್ಷ್ಮೀ ಯೋಜನೆಯ ಹಣವನ್ನೂ ಇದೇ ತಿಂಗಳಲ್ಲಿ ಫಲಾನುಭವಿಗಳಿಗೆ ಪಾವತಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ ಮಾತನಾಡಿ, ಅರಸನಘಟ್ಟ ಗ್ರಾಮ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆತೀವ್ರವಾಗಿತ್ತು.ಹಾಗಾಗಿಅರಸನಘಟ್ಟ ಗ್ರಾಮದಲ್ಲಿ ವಿದ್ಯುತ್ ಉಪಕೇಂದ್ರ



ಅವಶ್ಯವಾಗಿ ಬೇಕಾಗಿತ್ತು ಎಂದು ತಿಳಿಸಿದ ಅವರು, ಹೊಳಲ್ಕೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಕೋಡಿಹಳ್ಳಿ, ಎನ್.ಜಿ.ಹಳ್ಳಿ, ಹೊಳಲ್ಕೆರೆ, ರಾಮಗಿರಿ, ತಾಳ್ಯ , ತೇಕಲವಟ್ಟಿ ಸೇರಿದಂತೆ 9 ವಿದ್ಯುತ್ ಉಪಕೇಂದ್ರ ನಿರ್ಮಾಣ ಮಾಡುವ ಕೆಲಸ ಮಾಡಲಾಗುತ್ತಿದೆ. ಇದರ ಜೊತೆಗೆ ಮಲ್ಲಾಡಿಹಳ್ಳಿ, ಚಿತ್ರಹಳ್ಳಿ, ತೇಕಲವಟ್ಟಿ ಹಾಗೂ ಕೋಟೆಹಾಳ್ ಬಳಿ ಸ್ಥಾಪಿಸಲಾಗುತ್ತಿರುವ ವಿದ್ಯುತ್ ಕೇಂದ್ರ ಜಿಲ್ಲೆಯಲ್ಲಿಯೇ ದೊಡ್ಡ ವಿದ್ಯುತ್ ಕೇಂದ್ರವಾಗಿದ್ದು, ಸುಮಾರು 400 ಕೆವಿ ವ್ಯಾಟ್ ವಿದ್ಯುತ್ ಕೇಂದ್ರವನ್ನು ರೂ.500 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಇದಕ್ಕಾಗಿ 13 ಎಕರೆ ಜಮೀನನ್ನು ಸರ್ಕಾರದಿಂದ ಹಂಚಿಕೆ ಮಾಡಲಾಗಿದೆ ಎಂದು ಹೇಳಿದರು.

ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆರೆಕಟ್ಟೆ ಅಭಿವೃದ್ಧಿ, ಚೆಕ್‌ಡ್ಯಾಂಗಳ ನಿರ್ಮಾಣ, ಗುಣಮಟ್ಟದ ರಸ್ತೆ ನಿರ್ಮಾಣದ ಜೊತೆಗೆ ಮುಂಬರುವ ಆ.15ರೊಳಗೆ ಶಿವಗಂಗಾ ಕೆರೆ ಸೇರಿದಂತೆ ಹೊಳಲ್ಕೆರೆ ಕ್ಷೇತ್ರ ವ್ಯಾಪ್ತಿಯ ಎಲ್ಲ ಕೆರೆಗಳಿಗೆ ಭದ್ರ ಮೇಲ್ದಂಡೆ ಯೋಜನೆಯಡಿ ನೀರು ತುಂಬಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದ ಅವರು, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ವಿ.ವಿ.ಸಾಗರದಿಂದ 367 ಕೋಟಿ ವೆಚ್ಚದಲ್ಲಿ ಎಲ್ಲ ಹಳ್ಳಿಗಳಿಗೂ ಪೈಪ್‌ಲೈನ್ ಹಾಕಿಸಲಾಗಿದ್ದು, ಇನ್ನೂ ಐದಾರು ತಿಂಗಳಲ್ಲಿ ಸಕಾರಗೊಳ್ಳಲಿದ್ದು, 2052ರವರೆಗೆ ಜನಸಂಖ್ಯೆ ಆಧಾರದ ಮೇಲೆ ಕುಡಿಯುವ ನೀರು ಕೊಡುವ ಕೆಲಸ ಹಾಗೂ ಶಾಶ್ವತವಾಗಿ ಕೆರೆತುಂಬಿಸುವ ಕೆಲಸ ಮಾಡಲಾಗಿದೆ ಎಂದು ಶಾಸಕ ಡಾ.ಎಂ.ಚಂದ್ರಪ್ಪ ತಿಳಿಸಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ದಾವಣಗೆರೆ ಅಧೀಕ್ಷಕ ಇಂಜಿನಿಯರ್ ಜಿ.ಎಂ.ರೇವಣಸಿದ್ದಪ್ಪ ಮಾತನಾಡಿ, ಅರಸನಘಟ್ಟ ಗ್ರಾಮದಲ್ಲಿ 66/11 ಕೆ.ವಿ ವಿದ್ಯುತ್‌ಉಪಕೇಂದ್ರಹಾಗೂಸಂಬಂಧಿಸಿದ 66 ಕೆ.ವಿ ಜೋಡಿ ಪ್ರಸರಣ ಮಾರ್ಗ ನಿರ್ಮಾಣ ಕಾಮಗಾರಿಯನ್ನು ರೂ.13.02 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, 4.135 ಕಿ.ಮೀಟರ್ ಉದ್ದವಿದೆ. 21 ಗೋಪುರಗಳನ್ನು ನಿರ್ಮಿಸಲಾಗಿದೆ. 11 ಕೆವಿ ಹೊಸ ಮಾರ್ಗಗಳನ್ನು ನಿರ್ಮಿಸಲಾಗಿದೆ. ಈ ವಿದ್ಯುತ್ ಉಪಕೇಂದ್ರದಿಂದಾಗಿ ಅಪ್ಪರಸನಹಳ್ಳಿ, ಆಡನೂರು, ಪಾಡಿಘಟ್ಟೆ, ಶಿವಗಂಗಾ, ಚಿಕ್ಕಜಾಜೂರು, ಹೊಳಲ್ಕೆರೆ, ಚಿತ್ರಹಳ್ಳಿ, ಪಂಡರಹಳ್ಳಿ, ಅರಸನಘಟ್ಟ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಅನುಕೂಲವಾಗಲಿದೆ ಎಂದರು.

ಪ್ರಸ್ತುತ ಅರಸನಘಟ್ಟ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಹಾಲಿ ಇರುವ 66/11 ಕೆವಿ ಹೊಳಲ್ಕೆರೆ, ಚಿತ್ರಹಳ್ಳಿ, ಚಿಕ್ಕಜಾಜೂರು ಮತ್ತು ಪಂಡರಹಳ್ಳಿ ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ವ್ಯವಸ್ಥೆ ಇದ್ದು, ಸುಮಾರು 12 ರಿಂದ 15 ಕಿ.ಮೀಟರ್‌ಗಿಂತ ಹೆಚ್ಚಿನ ಉದ್ದದ 11 ಕೆ.ವಿ ವಿದ್ಯುತ್ ಮಾರ್ಗಗಳು ಇರುತ್ತವೆ. ಇದರಿಂದ ನಿರಂತರ ಮತ್ತು ತಡೆರಹಿತ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜಿನಲ್ಲಿತೊಂದರೆ ಉಂಟಾಗುತ್ತಿತ್ತು. ಈ ಯೋಜನೆ ಅನುಷ್ಠಾನದಿಂದ 11 ಕೆವಿ ವಿದ್ಯುತ್ ಮಾರ್ಗಗಳ ಉದ್ದವನ್ನು ಕಡಿಮೆ ಮಾಡುವುದರೊಂದಿಗೆ ತಡೆರಹಿತ ವಿದ್ಯುತ್ ಸರಬರಾಜು ಮಾಡಬಹುದಾಗಿದೆ. ಹಾಲಿ ಇರುವ 66/11 ವಿದ್ಯುತ್ ಉಪಕೇಂದ್ರಗಳಾದ ಹೊಳಲ್ಕೆರೆ, ಚಿತ್ರಹಳ್ಳಿ, ಚಿಕ್ಕಜಾಜೂರು ಮತ್ತು ಪಂಡರಹಳ್ಳಿ ವಿದ್ಯುತ್ ಉಪಕೇಂದ್ರಗಳ ಲೋಡಿಂಗ್ ಸಾಮರ್ಥ್ಯವನ್ನು ಹೆಚ್ಚಿಸಬಹುದಾಗಿದೆ. ಪದೇ ಪದೇ ಆಗುತ್ತಿರುವ 11 ಕೆವಿ ವಿದ್ಯುತ್ ಮಾರ್ಗಗಳ ಅಡಚಣೆಯನ್ನು ತಡೆಗಟ್ಟಿ ನಿರಂತರ ವಿದ್ಯುತ್ ಸರಬರಾಜು ಮಾಡುವುದು ಮತ್ತು ರೈತರ ಐ.ಪಿ.ಸೆಟ್‌ಗಳಿಗೆ ಉತ್ತಮ ಗುಣಮಟ್ಟದ ವೋಲ್ಟೇಜ್‌ಪಡೆಯಬಹುದಾಗಿದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಚಿತ್ರದುರ್ಗ ಕಾರ್ಯನಿರ್ವಾಹಕ ಇಂಜಿನಿಯರ್ ಬಿ.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆರ್. ರಮೇಶ್, ಬೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ತಿಮ್ಮರಾಯಪ್ಪ, ವಿದ್ಯುತ್ ಉಪಕೇಂದ್ರದ ಗುತ್ತಿಗೆದಾರರಾದ ರಾಮಕೃಷ್ಣ,ರವಿಯಣ್ಣ,ಗ್ರಾಮಪಂಚಾಯಿತಿ ಸದಸ್ಯರಾದ ತಿಮ್ಮಣ್ಣ, ತಿಪ್ಪಣ್ಣ, ಅಜ್ಜಪ್ಪ, ಹರೀಶ್,ಓಂಕಾರಮೂರ್ತಿ,,ದಯಾನಂದ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಆನಂದಪ್ಪ, ದಿವಾಕರ್, ಬಸವರಾಜಪ್ಪ, ಮುಖಂಡರಾದ ಈಶ್ವರಪ್ಪ, ಲೋಕೇಶ್ವರಪ್ಪ, ಅರಸನಘಟ್ಟ,ಚಿಕ್ಕಂದವಾಡಿ,ಕೇಶವಾಪುರ, ಹನುಮನಕಟ್ಟೆ,ಅಪ್ಪರಸನಹಳ್ಳಿ,ಆಡನೂರು, ಪಾಡಿಗಟ್ಟೆ ರೈತರು, ಮುಖಂರು ಇದ್ದರು.

# ಮರಾಠಿ ಪುಂಡರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪ್ರತಿಭಟನೆ

» ಚಿತ್ರದುರ್ಗ

ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಕಂಡಕ್ಟರ್ ಕನ್ನಡದಲ್ಲಿ ಮಾತನಾಡಿದ್ದಕ್ಕೆ ಮರಾಠಿ ಪುಂಡರು ಹಲ್ಲೆ ನಡೆಸಿರುವುದನ್ನು ಖಂಡಿಸಿ ಕರುನಾಡ ವಿಜಯಸೇನೆ ಕಾರ್ಯಕರ್ತರು ಇಲ್ಲಿನ ಸರ್ಕಾರ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿ ಬೆಳಗಾವಿ ರಸ್ತೆ ಸಾರಿಗೆ ನಿಗಮದ ಬಸ್ ಕಂಡಕ್ಟರ್ ಮಹದೇವನ ಮೇಲೆ ಹಾಕಿರುವ ಪೋಕ್ಸೊ ಕೇಸನ್ನು ಕೂಡಲೆ ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿದರು.

ಬಸ್ ಕಂಡಕ್ಟರ್ ಮರಾಠಿಯಲ್ಲಿ ಮಾತನಾಡಲಿಲ್ಲ ಎನ್ನುವ ಕಾರಣಕ್ಕಾಗಿ ಮರಾಠಿಗರು ನಡೆಸಿರುವ ಹಲ್ಲೆಯಿಂದ ಬೆಳಗಾವಿ ಪೊಲೀಸರಿಗೂ ಗಾಯಗಳಾಗಿವೆ.




ಮತ ಬ್ಯಾಂಕ್ ರಾಜಕಾರಣ ಮಾಡುತ್ತಿರುವ ರಾಜ್ಯ ಸರ್ಕಾರ ಕೆಲವು ಸಮುದಾಯದವರನ್ನು ಓಲೈಸುವ ಬುದ್ದಿವಂತಿಕೆ ಮಾಡುತ್ತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಗೃಹ ಸಚಿವರು ಪೊಲೀಸರ ಮೂಲಕ ಕನ್ನಡಿಗರ ಮೇಲೆ ಮನಬಂದಂತೆ ಕೇಸು ಹಾಕಿಸುತ್ತಿರುವುದು ಯಾವ ನ್ಯಾಯ ಎಂದು ಪ್ರತಿಭಟನಾಕಾರರು ಪ್ರಶ್ನಿಸಿದರು?

ಬಸ್ ಕಂಡಕ್ಟರ್ ಮಹದೇವನ ಮೇಲೆ ಹಾಕಿರುವ ಪೋಕ್ಸೋ ಕೇಸನ್ನುರದ್ದುಪಡಿಸಿಹಲ್ಲೆನಡೆಸಿರುವ ಮರಾಠಿಗರ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗವುದೆಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕರುನಾಡ ವಿಜಯಸೇನೆ ಜಿಲ್ಲಾಧ್ಯಕ್ಷ ಕೆ.ಟಿ.ಶಿವಕುಮಾರ್ ಎಚ್ಚರಿಸಿದರು.

ಕರುನಾಡ ವಿಜಯಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಪಿನಾಥ್, ನಿಸಾರ್ ಅಹಮದ್, ಅಖಿಲೇಶ್, ಅವಿನಾಶ್, ಮುಜಾಹಿದ್, ಯರ್‍ರಿಸ್ವಾಮಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

### 2 ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿದ ಡಾ.ಚಂದ್ರಪ್ಪ



» ಹೊಳಲ್ಕೆರೆ

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾಗಿದ್ದರೂ ಹೊಳಲ್ಕೆರೆಯಲ್ಲಿ ಒಳ್ಳೆಯ ಟಾರ್ ರಸ್ತೆಯಿರಲಿಲ್ಲ. ಎಷ್ಟು ಎಂ.ಎಲ್.ಎ.ಗಳು ಬಂದು ಹೋಗಿದ್ದಾರೆ ಯಾರ್‍ಯಾರೂ ಏನು ಮಾಡಿದ್ದಾರೆಂದು ಆಲೋಚನೆ ಮಾಡಿ ಎಂದು ಶಾಸಕ ಡಾ.ಎಂ.ಚಂದ್ರಪ್ಪ ಜನತೆಯನ್ನು ಎಚ್ಚರಿಸಿದರು. ಗುಂಜಿಗನೂರು ಗ್ರಾಮದಲ್ಲಿ ಮೂರು ಕೋಟಿ ರೂ.ವೆಚ್ಚದಲ್ಲಿ ಎರಡು ಕೆರೆ ಅಭಿವೃದ್ದಿ ಕಾಮಗಾರಿಗೆ ಭಾನುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಹೊಳಲ್ಕೆರೆಯಲ್ಲಿ ಹೈಟೆಕ್ ಆಸ್ಪತ್ರೆ ಕಟ್ಟಿಸಿದ್ದೇನೆ. ವೈದ್ಯರು ಇಲ್ಲಿಯೇ ತಂಗಬೇಕೆನ್ನುವ ಕಾರಣಕ್ಕಾಗಿ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಉತ್ತಮ ಗುಣಮಟ್ಟದ ಶಾಲಾ–ಕಾಲೇಜು, ಡಿಪ್ಲಮೋ, ಐ.ಟಿ.ಐ. ಪಾಲಿಟೆಕ್ನಿಕ್, ಪದವಿ ಕಾಲೇಜುಗಳನ್ನು ಕಟ್ಟಿಸಿ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡಿದ್ದೇನೆ. ಯಾರಿಂದಲೂ ಏನನ್ನು ಹೇಳಿಸಿಕೊಳ್ಳದೆ ಎಲ್ಲಿ ಏನು ಅಭಿವೃದ್ದಿ ಕೆಲಸ ಮಾಡಿದರೆ ಜನತೆಗೆ ಒಳ್ಳೆಯದಾಗುತ್ತದೆಂಬ ಅರಿವಿಟ್ಟುಕೊಂಡು ಕೆಲಸ ಮಾಡುತ್ತಿದ್ದೇನೆಂದರು.

## ಪ್ರಮುಖ ಸುದ್ದಿ

### ತಾಲ್ಲೂಕು ಮಟ್ಟದ ಮಹಿಳಾವಿಚಾರಗೋಷ್ಠಿ

# ಮಹಿಳಾ ಸಂಘಟನೆಗೆ ಆರ್ಥಿಕ ಶಕ್ತಿ ತುಂಬುವ ಕಾರ್ಯದಲ್ಲಿ ಯಶಸ್ವಿ ಹೆಜ್ಜೆ

» ಚಳ್ಳಕೆರೆ

ಶ್ರೀಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಳೆದ ಹಲವಾರುದಶಕಗಳಿಂದ ಮಹಿಳಾ ಸ್ವಸಹಾಯ ಗುಂಪುಗಳ ಸಬಲೀಕರಣ ಹಾಗೂ ಅವುಗಳ ಆರ್ಥಿಕ ಚೇತರಿಕೆಗೆ ಆದ್ಯತೆ ನೀಡುತ್ತಾ ಬಂದಿದ್ದು, ಸಾವಿರಾರು ಮಹಿಳಾ ಸಂಘಟನೆಯ ಲಕ್ಷಾಂತರ ಮಹಿಳೆಯರು ಇಂದು ಆರ್ಥಿಕವಾಗಿ ಶಕ್ತಿ ಮುನ್ನಡೆ ಸಾಧಿಸಿದ್ದಾರೆ. ಮಹಿಳೆಯರನ್ನು ಸದಾಕಾಲ ಉನ್ನತ್ತಮಟ್ಟದಲ್ಲಿ ಗೌರವಿಸುವ ಸಂಸ್ಥೆ ನಮ್ಮದಾಗಿದೆ ಎಂದು ಜ್ಞಾನವಿಕಾಸ ಯೋಜನೆಯ ಪ್ರಾದೇಶಿಕ ನಿರ್ದೇಶಕಿ ರತ್ನಮ್ಮ ತಿಳಿಸಿದರು. ಅವರು, ನಗರದ ವಿಶ್ವಕರ್ಮಕಲ್ಯಾಣಮಂಟಪದಲ್ಲಿತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿಯ ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ರಾಜ್ಯಪ್ರತಿಯೊಂದು ಜಿಲ್ಲೆಯಲ್ಲೂ ಜ್ಞಾನವಿಕಾಸ ಮಹಿಳಾವಿಭಾಗ ತನ್ನದೇಯಾದ ವಿಶೇಷ ಕಾರ್ಯಚಟುವಟಿಕೆಯಿಂದ ಮಹಿಳೆಯರ ಮನಗೆಲ್ಲುವಲ್ಲಿ ಯಶಸ್ವಿಯಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಈ ಸಂಘಟನೆಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲೂ ಸಹ ಮಹಿಳೆಯರನ್ನು ಶಕ್ತಿಶಾಲಿಯನ್ನಾಗಿ ಸದೃಢಗೊಳಿಸುವಲ್ಲಿ ಸಂಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಎಂದರು.



ಕಾರ್ಯಕ್ರಮ ಉದ್ಘಾಟಿಸಿದ ನಗರಸಭಾ ಸದಸ್ಯ ಕವಿತಾಬೋರಯ್ಯ ಮಾತನಾಡಿ, ಚಳ್ಳಕೆರೆ ತಾಲ್ಲೂಕು ಸೇರಿದಂತೆ ಜಿಲ್ಲೆಯ ನಾನಾಭಾಗಗಳಲ್ಲಿ ಶ್ರೀಕ್ಷೇತ್ರದ ಧರ್ಮಸ್ಥಳಗ್ರಾಮಾಭಿವೃದ್ದಿ ಯೋಜನೆಯ ಮಹಿಳಾ ಸಂಘಟನೆ ಅತ್ಯುತ್ತಮವಾಗಿದೆ. ಜ್ಞಾನವಿಕಾಸ ಯೋಜನೆಯಡಿ ಮಹಿಳೆಯರನ್ನು ಒಂದುಗೂಡಿಸಿ ಆರ್ಥಿಕ ಸಬಲತೆಯನ್ನು ನೀಡುವ ಕಾರ್ಯದಲ್ಲಿ ಈ ಸಂಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ. ಇಂದು ತಾಲ್ಲೂಕಿನ ಬಹುತೇಕ ಮಹಿಳಾ ಸಂಘಟನೆ ಇದರಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಯೋಜನಾಧಿಕಾರಿ ಶಶಿಕಲಾ, ಪ್ರಾಧ್ಯಾಪಕಿ ಕವಿತಾನಾಗೇಶ್, ಸಮನ್ವಯಾಧಿಕಾರಿ ಭವಾನಿಇಂದಿರಾ, ಲಕ್ಷ್ಮಿ, ಸಂತೋಷ್ ಮುಂತಾದವರು ಉಪಸ್ಥಿತರಿದ್ದರು.

# ವಿಶ್ವ ಸಾಮಾಜಿಕ ನ್ಯಾಯ ದಿನ 2025




ಪ್ರಾಚೀನ ಕಾಲದಿಂದಲೂ ಪ್ರಪಂಚದಾದ್ಯಂತ ಅನೇಕ ಪಿಡುಗುಗಳನ್ನು ಮತ್ತು ಮೌಢ್ಯತೆಗಳನ್ನು ಕಾಣಬಹುದಾಗಿದೆ, ಅವುಗಳಲ್ಲಿ ಮುಖ್ಯವಾಗಿ ಲಿಂಗ ತಾರತಮ್ಯ, ಜೀತಪದ್ಧತಿ, ಸಾಮಾಜಿಕ ಬಹಿಷ್ಕಾರ, ಬಡತನ ಮತ್ತು ಅನ್ಯಾಯದ ಕ್ರಮಗಳು ಪ್ರಮುಖವಾದವು. ಇವುಗಳನ್ನು ನಿರ್ಮೂಲನೆ ಮಾಡುವುದು ಅಷ್ಟು ಸುಲಭವಾಗಿರಲಿಲ್ಲ, ಇಡೀ ಸಮಾಜವೇ ಲಿಂಗ,ಜಾತಿ,ಧರ್ಮಗಳ ಮೇಲೆ ಅವಲಂಬಿತವಾಗಿ ಅವುಗಳ ಕಟ್ಟುಪಾಡುಗಳ ಕಾರಣದಿಂದಾಗಿ ಸಮಾಜದಲ್ಲಿ ಹಿಂಸೆ ತೇಜೋವಧೆಗಳಂತಹ ಅಮಾನವೀಯ ಕೃತ್ಯಗಳನ್ನು ಕಾಣಬಹುದಾಗಿತ್ತು. ಇವುಗಳ ನಿರ್ಮೂಲನೆಗೆ ಹಲವಾರು ಪ್ರಪಂಚದಾದ್ಯಂತ ಅನೇಕ ಸಮಾಜ ಸುಧಾರಕರು ಶ್ರಮಿಸಿರುವುದನ್ನು ಕಾಣಬಹುದು. ಈ ತಾರತಮ್ಯಗಳ ನಿವಾರಣೆಗೆ ಸಮಾಜದಲ್ಲಿಯ ಅನಿಷ್ಟಾಚಾರಗಳನ್ನು ತೊಡೆದು ಹಾಕಲು ಇರುವ ಪ್ರಮುಖ ಅಸ್ತ್ರವೆಂದರೆ ಅದುವೇ ಎಲ್ಲರಿಗೂ ಸಮಾನತೆ ಮತ್ತು ಸಮತೆಯನ್ನು ಕೊಡುವ ನ್ಯಾಯವಾಗಿದೆ ಅಂದರೆ ಸಾಮಾಜಿಕ ನ್ಯಾಯದ ಮನ್ನಣೆಯಾಗಿದೆ. ಸಾಮಾಜಿಕ ನ್ಯಾಯವೆಂದರೆ, ಶೋಷಣೆಗೆ ಒಳಗಾದವರ ಮತ್ತು ಶೋಷಣೆ ಒಳಗಾಗಿರುವ ಸಮುದಾಯಗಳನ್ನು ಮೇಲೆತ್ತಲು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲು ಹಾಗೂ ಎಲ್ಲರಿಗೂ ನ್ಯಾಯ ಪಡೆಯಲು ಇರುವ ಪರಿಕಲ್ಪನೆಯಾಗಿದೆ. ಸಾಮಾಜಿಕ ನ್ಯಾಯವು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕವಾಗಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಸ್ಥಿತಿಯಾಗಿದೆ.

ಇದೇ ನಿಟ್ಟಿನಲ್ಲಿ ವಿಶ್ವಸಂಸ್ಥೆಯು ಪ್ರತಿ ವರ್ಷ ಫೆಬ್ರವರಿ 20 ರಂದು ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ಆಚರಿಸುತ್ತಿದ್ದು, ಸಾಮಾಜಿಕ ನ್ಯಾಯ, ಲಿಂಗ ಸಮಾನತೆ ಮತ್ತು ಬಡತನ ನಿರ್ಮೂಲನೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಇದರೊಂದಿಗೆ ಸಾಮಾಜಿಕ ಏಕೀಕರಣ ಮತ್ತು ಉದ್ಯೋಗಕ್ಕೆ ಬೆಂಬಲವನ್ನೂ ನೀಡುವುದಾಗಿದೆ. ವಿಶ್ವಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕದಂತಹ ಅನೇಕ ಸಂಘ–ಸಂಸ್ಥೆಗಳು ಜನರಿಗೆ ಸಾಮಾಜಿಕ ನ್ಯಾಯದ ಮಹತ್ವವನ್ನು ಕುರಿತು ಜಾಗೃತಿಯನ್ನು ಮೂಡಿಸುತ್ತಿವೆ. ಬಡತನ ನಿರ್ಮೂಲನೆ, ಸಾಮಾಜಿಕ ಮತ್ತು ಆರ್ಥಿಕವಾಗಿ ಜನರನ್ನು ಸದೃಢಗೊಳಿಸಲು ಹಾಗೂ ನಿರುದ್ಯೋಗವನ್ನು ನಿಭಾಯಿಸುವ ಉದ್ದೇಶದಿಂದಾಗಿ ಅನೇಕ ಸಂಸ್ಥೆಗಳು ಹೆಚ್ಚಿನ ಸಾಮಾಜಿಕ ಯೋಜನೆಗಳನ್ನು ಹಮ್ಮಿಕೊಂಡಿವೆ. ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ಆಚರಿಸಲು ಇದರ ಸದಸ್ಯರು, ಕಾರ್ಮಿಕ ಸಂಘಗಳು ಮತ್ತು ಇತರೆ ಗುಂಪುಗಳನ್ನು ಆಹ್ವಾನಿಸಲಾಗುತ್ತದೆ. ರಷ್ಯಾದ ಸಾಮಾನ್ಯ ವಿಶ್ವಾಸಾರ್ಹತೆಯ ಕಾರ್ಮಿಕ ಒಕ್ಕೂಟವು "ಸಾಮಾಜಿಕನ್ಯಾಯಮತ್ತುಎಲ್ಲರಿಗೂ ಯೋಗ್ಯ ಜೀವನ" ಎಂಬ ಘೋಷಣೆಯನ್ನು ಘೋಷಿಸಿದೆ. ಈ ಪರಿಕಲ್ಪನೆಯಡಿಯಲ್ಲಿ ಕಾನೂನುಗಳನ್ನು ಮತ್ತು ಕೆಲವು ನೀತಿ ನಿಯಮಗಳನ್ನು ಉಲ್ಲೇಖಿಸಲು ಬಳಸಲಾಗಿದೆ. ಇದರಿಂದ ವ್ಯಕ್ತಿಯ ವ್ಯಕ್ತಿತ್ವ, ವೈಯಕ್ತಿಕ ಸ್ವ–ಅಭಿವೃದ್ಧಿ ಮತ್ತು ಸ್ವ– ನಿರ್ಣಯಗಳನ್ನು ಪ್ರೋತ್ಸಾಹಿಸುವ ಸಾಂಸ್ಥಿಕ ಪರಿಸ್ಥಿತಿಗಳನ್ನು ಒತ್ತಿ ಹೇಳುತ್ತದೆ. ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಹಲವಾರು ಸಿದ್ಧಾಂತಗಳನ್ನು ರಚಿಸಲು ಪ್ರಾಚೀನ ಗ್ರೀಸ್ ಮತ್ತು ರೋಮನ್ನರು ಪ್ರಯತ್ನಿಸಿದರು, ಪ್ರಮುಖವಾಗಿ ಪ್ಲೇಟೋನ ನ್ಯಾಯಯುತ ಸಮಾಜದ ದೃಷ್ಟಿಕೋನವು ಪ್ರಜಾಸತ್ತಾತ್ಮಕವಲ್ಲದ ಮತ್ತು ವರ್ಗ ಆಧಾರಿತವಾಗಿರುವ, ಸಾಮಾಜಿಕ ವರ್ಗಗಳ, ಸಮಗ್ರ ಕಾರ್ಯ ನಿರ್ವಹಣೆಯ ಮೂಲಕ ಸಾಮಾನ್ಯ ಒಳಿತಿಗಾಗಿ, ಸಾಮಾಜಿಕ ನ್ಯಾಯದ ಸಿದ್ಧಾಂತಗಳನ್ನು ರಚಿಸಲಾಗಿದೆ. ಪ್ಲೇಟೋ ಮಹಿಳೆಯರು ಪುರುಷರಂತೆ ಸಮರ್ಥರಾಗಿದ್ದಾರೆ ಎಂದು ಸಾಮಾಜಿಕ ನ್ಯಾಯದ ಮೂಲಕ ಅಭಿಪ್ರಾಯ ಪಟ್ಟಿದ್ದಾನೆ. ಹೀಗೆ ಹಲವಾರು ತತ್ವಶಾಸ್ತ್ರಜ್ಞರು ಸಹ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಪ್ರಮುಖವಾಗಿ ಸಾಮಾಜಿಕ ನ್ಯಾಯ ಎಲ್ಲರ ಹಕ್ಕಾಗಿರದೇ ಕೇವಲ ಕೆಲವರ ಸ್ವತ್ತಾಗಿರುವುದು ನಮ್ಮ ದುರದೃಷ್ಟವೇ ಹೌದು!, ಸಮಾನ ನ್ಯಾಯ ಎಲ್ಲರಿಗೂ ಸಿಗಲಿ ಎಂಬುದಾಗಿ ನಮ್ಮ ಸಂವಿಧಾನವೇ ತಿಳಿಸಿ, ತನ್ನಲ್ಲಿರುವ ಹಲವಾರು ಅನುಚ್ಛೇದಗಳ ಮೂಲಕ ಸಾಮಾಜಿಕ ನ್ಯಾಯವನ್ನು ತಿಳಿಸಿದೆ. ಸಮಾಜದಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳಲು ಸಾಮಾಜಿಕ ನ್ಯಾಯದ ಅವಶ್ಯಕತೆ ಇದೆ ಹಾಗಾಗಿ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಯಾವುದೇ ರಾಷ್ಟ್ರದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಯ ಆಧಾರ ಸ್ತಂಭಗಳಾಗಿವೆ.

ಇದರ ಅನ್ವಯ 1949ರಲ್ಲಿ ಜಾರಿಗೆ ಬಂದ ಮತ್ತು 1950ರಲ್ಲಿ ಅಳವಡಿಸಿಕೊಂಡ ಭಾರತೀಯ ಸಂವಿಧಾನವು ಸಮಾನತೆ ಮತ್ತು ಸಾಮಾಜಿಕ ನ್ಯಾಯ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ತತ್ವಗಳಾಗಿವೆ ಎಂಬುದನ್ನು ಪ್ರತಿಪಾದಿಸುತ್ತಾ ಬಂದಿದೆ. ಸಂವಿಧಾನದಲ್ಲಿ ಡಾ.ಬಿ.ಆರ್‌ಅಂಬೇಡ್ಕರ್‌ರವರು ಸಾಮಾಜಿಕ ನ್ಯಾಯದ ಅಂಶಗಳನ್ನು ಅನುಚ್ಛೇದದಲ್ಲಿ ಅಳವಡಿಸುವುದರ ಮೂಲಕ, ಸಮಾಜದ ಹಿತಾಸಕ್ತಿಗಾಗಿ ಮತ್ತು ಅಭಿವೃದ್ಧಿಗಾಗಿ ಶ್ರಮಿಸಿರುವುದನ್ನು ಕಾಣಬಹುದಾಗಿದೆ. ಇದು ಎಲ್ಲಾ ಜನರಿಗೆ ಅನ್ವಯಿಸುತ್ತದೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು, ಅವಕಾಶದ ನ್ಯಾಯಯುತ ಸಮಾನತೆಯ ಪರಿಸ್ಥಿತಿಗಳಲ್ಲಿ ಎಲ್ಲರಿಗೂ ತೆರೆದಿರುವ ಕಛೇರಿಗಳು ಮತ್ತು ಸ್ಥಾನಗಳಿಗೆ ಸಿಗಬೇಕು ಹಾಗೂ ಕನಿಷ್ಠ ಅನುಕೂಲಕರ ಜನರಿಗೂ ಹೆಚ್ಚಿನ ಪ್ರಯೋಜನ ನೀಡಬೇಕು ಎಂಬ ಎರಡು ತತ್ವಗಳನ್ನು ತಿಳಿಸಿದೆ. ಸಾಮಾಜಿಕ ನ್ಯಾಯ ಕೇವಲ ಹಕ್ಕಾಗಿರದೇ ಪ್ರಸ್ತುತ ಸಂದರ್ಭದಲ್ಲಿ ಪಾಠದ ಮೂಲಕ ಪಠ್ಯದಲ್ಲಿ ಅಳವಡಿಸಿ ಸಾಮಾಜಿಕ ನ್ಯಾಯ, ಸಮಾನತೆ, ಸಮತೆ ಮತ್ತು ಸಮಾನತೆಗಳನ್ನು ವಿಶೇಷ ಮೌಲ್ಯಗಳಾಗಿ ತೋರಿಸುವುದರ ಮೂಲಕ ಕಾಣಬಹುದಾಗಿದೆ.

ನ್ಯಾಯಯುತವಾದ ಮತ್ತು ಸಮಾನ ಸಮಾಜವನ್ನು ನಿರ್ಮಾಣ ಮಾಡುವ ಮುಖ್ಯ ಉದ್ದೇಶದಿಂದ 19ನೇ ಶತಮಾನದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯು ಪ್ರಾರಂಭವಾಗುತ್ತದೆ. ನಂತರ 20ನೇ ಶತಮಾನದಲ್ಲಿ ಸಮಾಜ ಸುಧಾರಕರು ಮತ್ತು ನಾಗರಿಕ ಹಕ್ಕುಗಳ ಕಾರ್ಯಕರ್ತರು ಈ ಪರಿಕಲ್ಪನೆಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸುತ್ತಾರೆ. ಬಡತನದ ವಿರುದ್ಧ ಹೋರಾಡಲು ಮತ್ತು ಪೂರ್ಣ ಉದ್ಯೋಗದ ಸ್ಥಿರ ಮತ್ತು ಸುರಕ್ಷಿತ ಸಮಾಜವನ್ನು ಹೊಂದಲು ಶ್ರಮಿಸಬೇಕು ಎಂದು ನೂರಕ್ಕೂ ಹೆಚ್ಚು ಅಂತರರಾಷ್ಟ್ರೀಯ ರಾಜಕೀಯ ನಾಯಕರು ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ಸಾಮಾಜಿಕ ಅಭಿವೃದ್ಧಿಗಾಗಿ ವಿಶ್ವ ಶೃಂಗಸಭೆಯನ್ನು 1995ರಲ್ಲಿ ನಡೆಸಿದರು. ಕೋಪನ್ ಹೇಗನ್ ಘೋಷಣೆ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಕ್ರಿಯೆಯ ಕಾರ್ಯಕ್ರಮವನ್ನು 2005ರಲ್ಲಿ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯು ಅದರ ಸದಸ್ಯ ರಾಷ್ಟ್ರಗಳೊಂದಿಗೆ ಚರ್ಚಿಸಿ ನಂತರ ಫೆಬ್ರವರಿ 20, 2007 ರಂದು ವಿಶ್ವ ಸಾಮಾಜಿಕ ನ್ಯಾಯದ ದಿನವೆಂದು ಘೋಷಿಸಿತು. ಈ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯ, ಲಿಂಗ ಸಮಾನತೆ ಮತ್ತು ಬಡತನ ನಿರ್ಮೂಲನೆಯನ್ನು ಮಾಡಲು ವಿಶ್ವ ಸಂಸ್ಥೆಯಸಾಮಾನ್ಯ ಸಭೆಯು 2009 ರಲ್ಲಿ ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆಯನ್ನು ಆಚರಣೆಯನ್ನು ಪ್ರಾರಂಭಿಸಿತು.

## ವಿಶ್ವ ಸಾಮಾಜಿಕ ನ್ಯಾಯ ದಿನದ ಉದ್ದೇಶಗಳು

- **ಪ್ರಪಂಚದಾದ್ಯಂತ ಸಾಮಾಜಿಕ ಅನ್ಯಾಯಗಳನ್ನು ಪರಿಹರಿಸಲು ಕ್ರಮವನ್ನು ತೆಗೆದುಕೊಳ್ಳುವುದು ಮತ್ತು ನ್ಯಾಯವನ್ನು ಕಾಪಾಡುವುದು.**
- **ಸಾಮಾಜಿಕ ನ್ಯಾಯದ ಮಹತ್ವದ ಬಗ್ಗೆ ಅರಿವು ಮೂಡಿಸಲು ಮತ್ತು ಅದನ್ನು ಸಾಧಿಸಲು ಹೆಚ್ಚಿನ ಜಾಗತಿಕ ಒಗ್ಗಟ್ಟು ಮತ್ತು ಸಹಕಾರದ ಅಗತ್ಯವನ್ನು ತಿಳಿಸುವುದು.**
- **ಅಂಚಿನಲ್ಲಿರುವ ಮತ್ತು ತುಳಿತಕ್ಕೊಳಗಾದ ಗುಂಪುಗಳು ಎದುರಿಸುತ್ತಿರುವ ನಿರಂತರ ಹೋರಾಟಗಳನ್ನು ಗುರುತಿಸಿ ಸಾಮಾಜಿಕ ನ್ಯಾಯವನ್ನು ಕೊಡಿಸುವುದು.**
- **ಸಮಾಜದಲ್ಲಿರುವ ಅಸಮಾನತೆನ್ನು ನಿರ್ಮೂಲನೆ ಮಾಡುವುದು.**
- **ಸಾಮಾಜಿಕ ನ್ಯಾಯವನ್ನು ಜನರಿಗೆ ಕಲ್ಪಿಸುವಲ್ಲಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಒಟ್ಟಾಗಿ ಸೇರಿ ಕೆಲಸಮಾಡುವುದು.**
- **ಶಿಕ್ಷಣ, ನ್ಯಾಯಲಯ ಮತ್ತು ಸಮುದಾಯದ ಮೂಲಕ, ವಿಶ್ವ ಸಾಮಾಜಿಕ ನ್ಯಾಯದ ದಿನವು ಹೆಚ್ಚು ನ್ಯಾಯಯುತ ಮತ್ತು ಸಮಾನವಾದ ಜಗತ್ತನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿದ್ದು, ಎಲ್ಲಾ ಜನರು ತಮ್ಮ ಜನಾಂಗ, ಲಿಂಗ, ಧರ್ಮ ಅಥವಾ ಸಾಮಾಜಿಕ ಸ್ಥಾನಮಾನವನ್ನು ಪರಿಗಣಿಸದೆ ಮೂಲಭೂತ ಸೇವೆ ಮತ್ತು ಮಾನವ ಹಕ್ಕುಗಳನ್ನು ಕಲ್ಪಿಸುವುದಾಗಿದೆ.**
- **ಸುಸ್ಥಿರ ಅಭಿವೃದ್ಧಿಯ ಪ್ರಮುಖ ಅಂಶವಾಗಿ ಪರಿಗಣಿಸಿ ಸಾಮಾಜಿಕ ನ್ಯಾಯದ ಪ್ರಾಮುಖ್ಯತೆಯನ್ನು ಪ್ರಚಾರ ಮಾಡುವ ಗುರಿಯನ್ನು ಈ ದಿನ ಹೊಂದಿದೆ. ಸಾಮಾಜಿಕ ಅನ್ಯಾಯಗಳನ್ನು ಪರಿಹರಿಸಲು ಕೆಲಸ ಮಾಡುವ ಮೂಲಕ, ನಾವು ಹೆಚ್ಚು ಶಾಂತಿಯುತ ಮತ್ತು ಸಮೃದ್ಧ ಸಮಾಜಗಳನ್ನು ನಿರ್ಮಿಸಬಹುದು, ಅಲ್ಲಿ ಪ್ರತಿಯೊಬ್ಬರೂ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ತಲುಪಲು ಮತ್ತು ಸಾಮಾನ್ಯ ಒಳಿತಿಗೆ ಕೊಡುಗೆ ನೀಡಲು ಅವಕಾಶವಿದೆ.**
- **ವಿಶ್ವ ಸಾಮಾಜಿಕ ನ್ಯಾಯದ ದಿನದ ಉದ್ದೇಶವು ಸಾಮಾಜಿಕ ನ್ಯಾಯವು ಮೂಲಭೂತ ಮಾನವ ಹಕ್ಕು ಮತ್ತು ಎಲ್ಲಾ ಜನರಿಗೆ ಉತ್ತಮ ಭವಿಷ್ಯದ ಪ್ರಮುಖ ಅಂಶವಾಗಿದೆ ಎಂಬ ಕಲ್ಪನೆಯನ್ನು ಪ್ರಚಾರ ಮಾಡುವುದಾಗಿದೆ.**

## ವಿಶ್ವ ಸಾಮಾಜಿಕ ನ್ಯಾಯ ದಿನದ ಆಚರಣೆಯ ವಿಧಾನಗಳು

ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ಆಚರಿಸಲು ಮತ್ತು ಸಮುದಾಯದಲ್ಲಿ ಸಾಮಾಜಿಕ ನ್ಯಾಯವನ್ನು ಉತ್ತೇಜಿಸಲು ಹಲವು ಮಾರ್ಗಗಳಿವೆ ಅವುಗಳೆಂದರೆ;

- **ಸಾಮಾಜಿಕ ನ್ಯಾಯದ ಕಾರ್ಯಕ್ರಮದಲ್ಲಿ ಭಾಗಿಯಾಗುವುದು.**
- **ಸಾಮಾಜಿಕ ನ್ಯಾಯ ಸಂಸ್ಥೆಯೊಂದಿಗೆ ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸುವುದು.**
- **ಸಮುದಾಯ ಮತ್ತು ಸಮಾಜದ ಏಳಿಗೆ ಹಾಗೂ ಅಭಿವೃದ್ಧಿಯಲ್ಲಿ ಸಮಾನತೆಯ ಕುರಿತು ಸಮುದಾಯ ಚರ್ಚೆಯನ್ನು ಆಯೋಜಿಸುವುದು.**
- **ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿಯನ್ನು ಹಂಚಿಕೊಳ್ಳುವುದು.**
- **ಸಾಮಾಜಿಕ ನ್ಯಾಯದ ಸಮಸ್ಯೆಗಳ ಕುರಿತು ಪುಸ್ತಕಗಳನ್ನು ಓದಿ ಅಥವಾ ಸಾಕ್ಷ್ಯಚಿತ್ರಗಳನ್ನು ವೀಕ್ಷಿಸಿ ಕಲಿತದ್ದನ್ನು ಇತರರೊಂದಿಗೆ ಹಂಚಿಕೊಳ್ಳುವುದು.**
- **ಅಂಚಿನಲ್ಲಿರುವ ಸಮುದಾಯಗಳ ಒಡೆತನದ ಸ್ಥಳೀಯ ವ್ಯಾಪಾರಗಳನ್ನು ಬೆಂಬಲಿಸುವುದು, ತಾರತಮ್ಯ ಅಥವಾ ಅಸಮಾನತೆಯ ವಿರುದ್ಧ ಮಾತನಾಡುವುದು.**
- **ಬಡತನ ನಿರ್ಮೂಲನೆ, ಸಾಮಾಜಿಕ, ಆರ್ಥಿಕವಾಗಿ ಜನರನ್ನು ಸದೃಢಗೊಳಿಸಲು ಮತ್ತು ನಿರುದ್ಯೋಗ ಹೊರಗಿಡುವಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ಶಾಲಾ-ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ವಿಶೇಷ ಚಟುವಟಿಕೆಗಳನ್ನು ಸಿದ್ಧಪಡಿಸಿ ಆಯೋಜಿಸಿವುದು.**
- **ರೇಡಿಯೋ ಮತ್ತು ದೂರದರ್ಶನ ಕೇಂದ್ರಗಳು, ಪತ್ರಿಕೆಗಳು ಮತ್ತು ಇಂಟರ್ನೆಟ್ ಸೈಟ್‌ಗಳು ಸೇರಿದಂತೆ ವಿವಿಧ ಮಾಧ್ಯಮಗಳು ವಿಶ್ವ ಸಾಮಾಜಿಕ ನ್ಯಾಯ ದಿನದ ಮಹತ್ವ, ಆಚರಣೆಯ ಉದ್ದೇಶಗಳ ಕುರಿತು ಜಾಗೃತಿ ಮೂಡಿಸುವುದು.**

ವಿಶ್ವ ಸಾಮಾಜಿಕ ನ್ಯಾಯ ದಿನವು ಸಮುದಾಯದಲ್ಲಿ ಮತ್ತು ಪ್ರಪಂಚದಾದ್ಯಂತ ಸಾಮಾಜಿಕ ನ್ಯಾಯದ ಕುರಿತು ಕ್ರಮ ತೆಗೆದುಕೊಳ್ಳುವುದಾಗಿದೆ. ಇದು ಪ್ರತಿಯೊಬ್ಬರನ್ನು ಸಮಾನ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳು ಮತ್ತು ಅವಕಾಶಗಳಿಗೆ ಅರ್ಹರು ಎಂಬ ದೃಷ್ಟಿಕೋನ ಹೊಂದಿದೆ. ಕುವೆಂಪು ಅವರ ವಿಶ್ವ ಮಾನವ ಸಂಕೇತವನ್ನು ಸಾರುವುದಾಗಿದ್ದು ಬದುಕಿನ ಪ್ರತಿ ಹಂತದಲ್ಲೂ ಮಾನವನ ಏಳಿಗೆಯು ಮುಖ್ಯವಾಗಿ ಕಂಡುಬರುತ್ತದೆ. ಮಾನವನ ಸಂತೋಷ, ಮಾನವೀಯ ಮೌಲ್ಯಗಳನ್ನು ಉಳಿಸುವಲ್ಲಿ ಮತ್ತು ಬೆಳಸುವಲ್ಲಿ ಈ ದಿನಾಚರಣೆಯ ಮೂಲಕ ಎಲ್ಲರು ಕೈಜೊಡಿಸಬೇಕಾಗಿದೆ.

**ಲೇಖಕರು:**

- **ಡಾ. ಜಗನ್ನಾಥ ಕೆ. ಡಾಂಗೆ, ಶಿಕ್ಷಣ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ.**
- **ಡಾ. ಉಷಾ. ಜಿ. ಆರ್. ಪ್ರಾಂಶುಪಾಲರು, ಒಂಕಾರ್‌ಮಲ್ ಶಿಕ್ಷಣ ಮಹಾವಿದ್ಯಾನಿಲಯ, ಮೈಸೂರು.**
- **ಡಾ. ಭವ್ಯ. ಆರ್. ಪೋಸ್ಟ್‌ಡಾಕ್ಟರಲ್, ಸಂಶೋಧನಾರ್ಥಿ, ಕುವೆಂಪು ವಿಶ್ವವಿದ್ಯಾಲಯ.**

# ರಾಹುಲ್ ತಂಡಕ್ಕೆ 'ಅಪ್ಪು 11' ಕ್ರಿಕೆಟ್ ಕಪ್



» **ಚಿತ್ರದುರ್ಗ**

ಚಿತ್ರದುರ್ಗ ಅಪ್ಪು ಗೆಳೆಯರ ಬಳಗ ವತಿಯಿಂದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವಕ ಸ್ವಾಮೀಜಿರವರ ನೇತೃತ್ವದಲ್ಲಿ, ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ಜರುಗಿದ ಅಪ್ಪು 11 ಕ್ರಿಕೆಟ್ ಕಪ್ –2025ರ ವಿಜೇತ ತಂಡವಾಗಿ ರಾಹುಲ್ ತಂಡ ಹೊರಹೊಮ್ಮಿದೆ.

ಕಳೆದ ಮೂರು ದಿನಗಳಿಂದ ಚಿತ್ರದುರ್ಗ ನಗರದಲ್ಲಿ ಕ್ರಿಕೆಟ್ ಜಾತ್ರೆ ನಡೆಯುತ್ತಿದ್ದು ನಗರವಾಸಿಗಳು ಸುಮಾರು 24 ತಂಡಗಳಾಗಿ ಸೆಣಸಾಡಿದ್ದಾರೆ. ಅಂತಿಮವಾಗಿ ಮೂರನೇ ರನ್ನರ್ ಅಪ್ ಆಗಿ ಸುವರ್ಣ ತಂಡ, ಎರಡನೇಯ ರನ್ನರ್ ಅಪ್ ಆಗಿ ಎವರಿಗ್ರೀನ್ ತಂಡ ಹೊರಹೊಮ್ಮಿದೆ. ಮೊದಲನೇ ರನ್ನರ್ ಅಪ್ ಆಗಿ ಚಾಣಕ್ಯ ತಂಡ ಪಾರಿತೋಷಕ ಹಾಗೂ 25.000 ರೂಪಾಯಿಗಳ ಬಹುಮಾನ ಪಡೆದಿದೆ. ಅಪ್ಪು 11 ಕಪ್ ವಿಜೇತರಾಗಿ ರಾಹುಲ್ ತಂಡವು ಹೊರಹೊಮ್ಮಿದೆ. ತಂಡವು ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ, ಭೋವಿಗುರುಪೀಠದ ಕ್ರೀಡಾಪ್ರೋತ್ಸಾಹ ನಿಧಿಯಿಂದ ನೇರವಿನಿಂದ 50.000 ರೂಪಾಯಿಗಳ ನಗದು ಪಾರಿತೋಷಕವನ್ನು ಪಡೆದಿದೆ.

ಮಂಜುನಾಥ್ ಚಾರಿ ಅವರು ಮ್ಯಾನ್ ಆಫ್ ದಿ ಮ್ಯಾಚ್ ಸ್ವಿಕರಿಸಿದರು. ಚಾಣಕ್ಯ ತಂಡದ ಶಿವುಕುಮಾರ ಮ್ಯಾನ್ ಆಫ್ ದಿ ಸಿರಿಸ್ ಪಡೆದರು. ರಾಹುಲ್ ತಂಡದ ಲಿಂಗರಾಜು ಬೆಸ್ಟ್ ಬ್ಯಾಟ್ಸ್ ಮ್ಯಾನ್ ಪ್ರಶಸ್ತಿ ಸ್ವೀಕರಿಸಿದರು. ರಾಹುಲ್ ತಂಡ ರಂಗಸ್ವಾಮಿ ಬೆಸ್ಟ್ ಭೋಲರ್ ಪ್ರಶಸ್ತಿ ಸ್ವೀಕರಿಸಿದರು.ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ ಅಧ್ಯಕ್ಷತೆವಹಿಸಿದ್ದರು. ಸಮಾರಂಭವನ್ನು ಕೆ.ಎನ್. ರಾಜಣ್ಣ ಉದ್ಘಾಟಿಸಿದರು. ಉದ್ಯಮಿ ಸಮರ್ಥ ಹಾಗೂ ಮೇದೆಹಳ್ಳಿ ವಿಜಯಕುಮಾರ ಅಪ್ಪು ಬಳಗದ ಪ್ರಾಸದ, ಇಂಧು, ನಾಗರಾಜ ಇದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T